ವಿಧಾನಮಂಡಲದ ಉಭಯ ಸದನಗಳನ್ನುದ್ದೇಶಿಸಿ ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಅಧಿಕೃತ ವರದಿ

ಶುಕ್ರವಾರ 12ನೇ ಫೆಬ್ರವರಿ 1993 ಸಾಯನ ಸೌರ ಮಾಘ, ೧೯೧೪ ಶಕ

ಸನ್ಮಾನ್ಯ ರಾಜ್ಯಪಾಲರಾದ ಶ್ರೀ ಖುರ್ಷಿದ್ ಆಲಂ ಖಾನ್‌ರವರು ಕರ್ನಾಟಕ ವಿಧಾನಸಭೆ ಹಾಗೂ ವಿಧಾನಪರಿಷತ್ತಿನ ಸಂಯುಕ್ತಾಧಿವೇಶನವನ್ನುದ್ದೇಶಿಸಿ ವಿಧಾನಸಭೆಯ ಸಭಾಂಗಣದಲ್ಲಿ ಮಧ್ಯಾಹ್ನ 4-00 ಗಂಟೆಗೆ ಮಾಡಿದ ಭಾಷಣ.

ರಾಜ್ಯಪಾಲರು ಮಧ್ಯಾಹ್ನ 4-00 ಗಂಟೆಗೆ ವಿಧಾನಸೌಧದ ಮುಖ್ಯ-ದ್ವಾರದ ಬಳಿ ಇರುವ ದ್ವಾರಮಂಟಪಕ್ಕೆ ಆಗಮಿಸಿದರು. ರಾಜ್ಯಪಾಲರು ತಮ್ಮ ಕಾರಿನಿಂದ ಇಳಿದ ಬಳಿಕ ಅವರನ್ನು ಮಾನ್ಯ ಸಭಾಪತಿಯವರು (ಕರ್ನಾಟಕ ವಿಧಾನಪರಿಷತ್ತು) ಮತ್ತು ವಿಧಾನಮಂಡಲದ ಕಾರ್ಯದರ್ಶಿ, ವಿಧಾನಪರಿಷತ್ತಿನ ಕಾರ್ಯದರ್ಶಿಯವರುಗಳು ಸ್ವಾಗತಿಸಿದರು. ನಂತರ ಪೂರ್ವಭಾಗದಲ್ಲಿರುವ ಲಿಫ್ಟ್‌ಗೆ ರಾಜ್ಯಪಾಲರನ್ನು ಕರೆದೊಯ್ಯಲಾಯಿತು. ಮೊದಲನೆಯ ಮಹಡಿಯಲ್ಲಿ ಲಿಫ್ಟ್‌ನಿಂದ ಹೊರಬಂದ ಬಳಿಕ ಈ ಕೆಳಕಂಡ ಕ್ರಮದಲ್ಲಿ ಮೆರವಣಿಗೆಯನ್ನು ರೂಪಿಸಲಾಯಿತು.

ಕಾರ್ಯದರ್ಶಿಯವರು
(ವಿಧಾನಪರಿಷತ್ತು)

ಕಾರ್ಯದರ್ಶಿಯವರು
(ವಿಧಾನಸಭೆ)

ಮಾನ್ಯಸಭಾಪತಿಯವರು
(ಕರ್ನಾಟಕ ವಿಧಾನಪರಿಷತ್)

ರಾಜ್ಯಪಾಲರು

ಎ.ಡಿ.ಸಿ.

ಈ ರೀತಿಯ ಮೆರವಣಿಗೆಯು ವಿಧಾನಸಭೆಯ ಸದನದ ಕಡೆಗೆ ಹೊರಟಿತು. ಸಭಾಸದನದ ದ್ವಾರದ ಬಳಿ ಮೆರವಣಿಗೆ ಬಂದ ಕೂಡಲೆ, ರಾಜ್ಯಪಾಲರ ಆಗಮನವನ್ನು ಮಾರ್ಷಲ್‌ರವರು ಸಭೆಗೆ ತಿಳಿಸಿದರು ಮತ್ತು ರಾಷ್ಟ್ರಗೀತೆಯನ್ನು ನುಡಿಸಲಾಯಿತು. ರಾಜ್ಯಪಾಲರು ಸದನವನ್ನು ಪ್ರವೇಶಿಸಿ ವೇದಿಕೆಯ ಮೇಲೆ ಕುಳಿತುಕೊಳ್ಳುವತನಕ ಮಾನ್ಯ ಸದಸ್ಯರುಗಳು ಎದ್ದುನಿಂತುಕೊಂಡಿದ್ದರು.

ಸಭಾಸದನದ ವೇದಿಕೆಯ ಮುಂದೆ ಬಂದ ಬಳಿಕ ಮೆರವಣಿಗೆಯು ಇಭ್ಭಾಗವಾಯಿತು. ವೇದಿಕೆಯ ಮೇಲೆ ಮಾನ್ಯ ಅಧ್ಯಕ್ಷರವರು (ಪ್ರೊಟೆಮ್) ರಾಜ್ಯಪಾಲರ ಬಲಭಾಗದಲ್ಲಿಯೂ, ಮಾನ್ಯ ಸಭಾಪತಿಯವರು ರಾಜ್ಯಪಾಲರ ಎಡಭಾಗದಲ್ಲಿಯೂ ಕುಳಿತುಕೊಂಡರು. ರಾಜ್ಯಪಾಲರು ವೇದಿಕೆಯ ಮಧ್ಯಭಾಗದಲ್ಲಿರುವ ಆಸನದಲ್ಲಿ ಕುಳಿತುಕೊಂಡರು. ಕಾರ್ಯದರ್ಶಿಗಳಿಬ್ಬರು ವೇದಿಕೆಯ ಮುಂದುಗಡೆ ಇರುವ ಆಸನದಲ್ಲಿ ಕುಳಿತುಕೊಂಡರು.

(ಈ ಹಂತದಲ್ಲಿ ಪಕ್ಷೇತರ ಸದಸ್ಯರಾದ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ''ನಮಗೆ ರಾಜ್ಯಪಾಲರ ಭಾಷಣ ಬೇಡ'' ಎಂಬ ಘೋಷಣೆಯನ್ನು ಕೂಗುತ್ತಿದ್ದರು.)

ರಾಜ್ಯಪಾಲರ ಭಾಷಣ

ಸನ್ಮಾನ್ಯ ರಾಜ್ಯಪಾಲರು :- ಸನ್ಮಾನ್ಯ ಸಭಾಧ್ಯಕ್ಷರೇ, ಸನ್ಮಾನ್ಯ ಸಭಾಪತಿಯವರೇ ಮತ್ತು ಮಾನ್ಯ ಸದಸ್ಯರೇ, ರಾಜ್ಯ ವಿಧಾನಮಂಡಲದ ಈ ಅಧಿವೇಶನಕ್ಕೆ ನಿಮ್ಮನ್ನು ಸ್ವಾಗತಿಸಲು ನನಗೆ ಅತೀವ ಸಂತೋಷವೆನಿಸುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ವಿಧಾನಮಂಡಲಕ್ಕೆ ಈ ಸರ್ಕಾರ ಅವಮಾನ ಮಾಡಿದೆ. ವಿಧಾನಮಂಡಲ ಸೇರುವುದು ಗೊತ್ತಿದ್ದರೂ ಸಹ ಸಾರಿಗೆ ದರವನ್ನು ಏಕಪಕ್ಷೀಯವಾಗಿ 25 ಪರ್ಸೆಂಟ್ ಏರಿಸಿದೆ.

(ಗೊಂದಲ)

SRI B.I.PATIL:- Sir, so far the Maharastra - Karnataka boundary dispute is not solved. Recently the Hon'ble Union Home Minister has said at Bangalore that the boundary dispute is still alive. The Government of Karnataka is not showing any interest to solve the problem. The people of border areas speaking Marathi Language are interested in going to Maharastra.

(INTERRUPTIONS)

ಶ್ರೀ ವಾಟಾಳ್ ನಾಗರಾಜ್:- ಮಹಾಜನ್ ವರದಿಯನ್ನು ಜಾರಿ ಮಾಡಿ.

(ಗೊಂದಲ)

SRI B.I.PATIL:- Chatrapathi Shivaji Maharajki Jai, Jain Bhavani, Jai Shivaji, M.E.S Zindabad...

(INTERRUPTIONS)

ಶ್ರೀ ವಾಟಾಳ್ ನಾಗರಾಜ್:- ಎಂ.ಇ.ಎಸ್.ಗೆ ಧಿಕ್ಕಾರ.

(At this stage all the Independent Members of Belgaum Dist. staged a walkout.)

HIS EXCELLENCY THE GOVERNOR:- I consider it a great honour to be at the service of the people of Karnataka, as the Governor of one of India's most progressive States.

2. Honourable Members, it was on 6th December, 1992, that one of the greatest tragedies in Independent India was enacted at Ayodhya. Today, we are meeting in the shadow of that tragedy. One of the most serious consequences of the happenings at Ayodhya is, that the very secular foundation of our nation is threatened. Large scale clashes, violence and rioting took place in different parts of the country. Karnataka, a peace loving State, known for its tolerant and warm hearted people, was also most unfortunately affected. Certain areas in our State and more particularly Bangalore, Mysore, Hubli-Dharwad, Gulbarga and the suburbs of Mangalore witnessed communal clashes. My Government took immediate and firm measures to control the communal violence and ensured that the severity of the impact was reduced. It was the firm action of my Government that was responsible for containing the further spread of violence. The role played our Police forces was commendable. The scale of relief to families where death has occured has been enhanced by my Government from Rs.50,000 to Rs.2 lakhs. For those injured, relief has been provided at Rs.15,000 per

individual. Any individual who has been permanently incapacitated and does not have any means of livelihood is entitled to a monthly pension of Rs.250. A scheme has also been worked out for providing employment to the widow or any member of a family who has lost a person in the communal clashes. For loss of property, relief has been provided upto Rs.20,000. Further, subsidy for the interest on loans from Banks for rehabilitation will also be provided.

3. My Government wishes to reiterate its firm resolve to put down all kinds of communal incidents and prevent their recurrence. Our relentless fight will continue against communal forces, who for narrow short term gains preach hatred and create suspicion among different communities. My Government will make full use of the provisions of Preventive Detention laws to put into operation measures against communal and disruptive elements. Those indulging in disruptive and anti-national activities would meet with a firm response from my Government.

4. Honourable Members, I am happy to inform you that the people of Karnataka responded magnificently to the call for a communal harmony week organised by my Government. A notable feature was the forming of human chains in various parts of the State and the taking of an oath for maintaining communal harmony and upholding secularism. The tremendous and enthusiastic response of our people is nothing but a visible symbol of popular determination to hold aloft the basic ideals of our Constitution, sacred to all of us assembled here. My Government will continue to make every effort to involve the people in the fight against communalism, religiosity in politics and narrow opportunism. What is required today is a people's movement to thwart the designs of these misguided elements who are attempting to destroy the foundations of our secular democracy.

5. In order to deal effectively with serious communal situations and other grave emergencies, it is proposed to set up a Special Action Force on the lines of the Rapid Action Force set up by the Government of India recently. This force will be imparted special training to carry out its tasks.

6. My Government considers it a prime duty to protect women from exploitation and discrimination. With this object in view it is proposed to strengthen the Cell in the Police Department for Protection of Women's Rights. Cases of rape, dowry deaths, abduction of women, and other forms of harassment to women will be dealt with by the Cell. The Cell would also act as a centre to counsel Women about their rights and the protection available to them under the law. Keeping in view the fact the women generally hesitate to approach police stations, it has been planned to establish police stations

exclusively staffed by women. A beginning will be made with one such police station in Bangalore and in due course of time, other cities will be covered.

7. My Government attaches high priority to the implementation of the 15 Point Programme for the Welfare of Minorities which was initiated under the able guidance of the late Smt. Indira Gandhi and has been pursued vigorously by the Prime Minister Shri P.V. Narasimha Rao. Under this programme, my Government has been strenghthening and expanding the activities of the Karnataka Minorities Development Corporation and the Directorate of Backward Classes and Minorities. Under the Swavalambana Scheme of the Karnataka Minorities Development Corporation, margin money with easy instalments and low rates of interest are provided to those who avail of loans from Banks. The Karnataka State Wakfs Council has already been constituted with a revolving fund of Rs.60 lakhs to advance loans to the wakf institution for taking up economically viable projects for the maintenance and further development of these institutions. The Karnataka State Wakf Foundation for Women's Development has also been created to encourage Muslim women in the field of education and self-employment. Provision has also been made for improvement of the working conditions of Muslim women who are engaged in home and cottage industries under the Foundation. In keeping with this approach, the terms of reference of the State Minorities Commission have been substantially broadened.

8. As the Hon'ble Members are aware, the people in certain areas of the State particularly in the Districts of Raichur, Bellary and parts of Dharwad had to face a cataclysmic situation in the wake of cyclonic storms which ravaged large tracts of lands and villages. 98 human lives were lost and extensive damages were caused to livestock, lands and infrastructural facilities like roads and bridges, communication lines and houses etc. My Government responded to the situation with speed and sensitivity. A sum of Rs.53 crores has been released to meet the requirements of relief to the victims of these natural calamities in the 7 districts of Raichur, Bellary, Dharwad, Chitradurga, Shimoga, Chickmagalur and Mysore. The Government of India at the instance of the Prime Minister released substantial ways & means advance for this purpose.

9. My Government will endeavour to provide a clean administration and inject credibility and integrity into the administrative system. A new administrative culture will be developed which will ensure that those who fail to display integrity and efficiency will be dealt with severely while honest and competent civil servants will receive every encouragement to pursue excellence in their workplace. In order to achieve the goals that my Government has set

for itself and to ensure implementation of various prgorammes and schemes effectively and in a time-bound manner, we intend to introduce and implement a few crucial concepts in administration. My Government recognises that for achievement of the goals adequate Authority will have to be delegated to Government functionaries at different levels. At the same time, my Government will insist on the exercise of this Authority for the purpose of Achievement of the specific goals and targets. Government will also ensure enforcement of ACCOUNTABILITY at all levels so that commensurate ACHIEVEMENT results from the exercise of AUTHORITY. My Government proposes to strengthen the Lokayuktha by setting up branches at Dharwad, Gulbarga and Mangalore and also to ensure speedy disposal of cases under the Prevention of Corruption Act, 1988 by appointing Special Judges who can hold the trial of offences on a day to day basis in Bangalore and at Dharwad, Gulbarga and Mangalore. The procedure in disposal of cases of mere misconduct which often result in their being dragged on will be simplified so that minor penalties can be imposed quickly after the misconduct has come to light.

10. My Government attaches the highest importance to the redressal of public grievances. It is proposed to adopt a two pronged approach to deal with this problem. One of the main reasons for non-redressal of public grievances has been tardy disposal of files in Government offices. Special attention would, therefore, be paid to increase the pace of disposal in all Government offices throughout the State. Secondly, Ministers and senior officers will set apart a specific time during their tours to various districts to hear the public and to the extent possible to provide relief to the aggreived person at the District/Taluk level itself. This will avoid people travelling from distant places to Bangalore to seek redressal of their grievances.

11. My Government is committed to the use of Kannada in the State administration at all levels. While Kannada is being used extensively upto the District level, it is a matter of concern that at the State level it has still not reached a satisfactory stage. We shall take necessary measures to ensure that Kannada is used as a language of administration at the State level also in a period of one year.

12. My Government proposes to guage the performance of civil servants at all levels through the fixing of targets and the monitoring of progress against them. Civil servants will also be given appropriate training and reorientation courses to upgrade their levels of knowledge and skill and to make them more committed to provide a fair and just administration. The Administrative Training Institute at Mysore and the Secretariat Training Institute of Bangalore will be

brought under the administrative control of a single agency called the Director General of Administrative Reforms and Training, which will be empowered to supervise the training activities of all training institutes under the control of all departments. The Director General will formulate a plan for training of civil servants at all levels in the State for a period of five years so as to inculcate in them the love for excellence.

13. My Government considers education to be fundamental to the development of the people of the State and to the proper utilisation of its human resources. Emphasis will be placed on the Total Literary Campaign with accent on the involvement of rural women folk. My Government plans to achieve Total Literacy for the entire state during the next two years.

14. In order to achieve universalisation of primary education, my Government will make strenuous efforts to attain universal enrolment, universal retention and universal achievement. For improvement of the quality of Primary Education, District Institutions of Education and Training will continuously expand the new programme of 'Minimum levels of Learning' to be implemented in 1993-94 with UNICEF and Government of India support.

15. My Government will also stress the importance of Vocational Education. During the next few years i.e. upto the end of the Eighth Five Year Plan. 1200 new courses will be introduced for students at the +2 Stage of education. The objective of this programme is to enable the students completing +2 stage of education to find remunerative wage employment or to engage themselves in self-employment. My Government will also encourage women to take to modern and lucrative technical courses.

16. The field of professional education is be set with problems relating to admission, and the fees relating thereto. Keeping in view the need to give due weightage to merit, my Government proposes to frame rules for admission to these institutions on the lines of the Judgement rendered by the Supreme Court recently.

17. In line with the policy of liberalisation announced by the Government of India, in Karnataka my Government will concentrate henceforth on the basic tasks of provision of the much-needed infrastructural facilities and essential inputs to bring about a speedy transformation of the social and economic life of the people. Private entrepreneurs from within and outside the State are welcome to take advantage of the favourable environment in Karnataka to set up new industries. They can rest assured that my Government will take steps to see that necessary facilities like land, power, communication, water etc.,

will be made available without undue delay. Government's own effort will be directed towards hastening the pace of rural industrialisation and generation of employment.

18. As a result of industrialisation and massive migration, the problems connected with urbanisation and urban development have become both pressing and complex. The urban population of Karnataka has reached 1.38 crores constituting 30.9% of the State's population. We now have 21 Class I Cities with a population of more than one lakh in the State. It has, therefore, become necessary to evolve a proper policy towards urban development. My Government would like to adopt a policy which would aim at the balanced development of different regions of the State. Suitable steps will be taken to regulate the growth of Bangalore on the one hand and encourage the development of other towns and cities in the State on the other.

19. The Capital city of Bangalore has been experiencing the adverse effects of rapid and haphazard growth-inadequate shelter, water and transport, traffic congestion, pollution etc. In order to come to grips with these problems, it has become necessary to adopt a new approach towards the planning and development of not only Bangalore but the entire region surrounding the city. It is, therefore, proposed to prepare a comprehensive Regional Development Plan integrating the spatial, economic and social aspect of planning. My Government also intends to initiate measures to provide for a Mass Rapid Transit System for Bangalore to relieve pressure on the roads and the road transport services. With a view to streamlining the institutional arrangements for the management of the city, my Government also proposes to review the role of the Bangalore City Corporation, Bangalore Development Authority and Bangalore Metropolitan Region Development Authority. A High Power Committee has already been set up under the Chairmanship of the Chief Secretary to plan and monitor the progress of measures for the sound development of the Metropolitan Region.

20. My Government attaches paramount importance to the Development of Irrigation in order to bring about improvement in productivity in Agriculture as well as to increase the employment intensity of agricultural and allied activities. At this juncture, I would like to emphasise my Government's commitment to expedite the completion of the Irrigation Projects in the Krishna Basin so that in terms of the Bachawat Award our share of water is fully utilised well in time i.e., before 2000 A.D. Similarly, it will be our endeavour to bring to an end the century old handicap faced by our farmers in the Cauvery Basin by taking all necessary steps with due regard to the legal process and to ensure that our share of the water in this Basin is fully harnessed.

21. My Government accords very high priority to the Energy Sector and will provide adequately for all the ongoing scheme for generation of power under the Karnataka Power Corporation. The provisions for strengthening the transmission and distribution systems under the Karnataka Electricity Board will also be increased. In order to ensure that generation of power keeps pace with the increasing demands made for power, my Government intends to encourage participation of the private sector in this area, particularly in the field of Thermal Power Plants.

22. In the area of Agriculture and other allied activities which will continue to form a core area for Economic Development of the State, my Government intends to achieve the targeted production of nearly 89 lakh tone of foodgrains, 20.3 lakh tons of oil seeds, 8.70 lakh bales of cotton and 200 lakh tons of sugarcane. My Government will focus attention on the problems of dry and rainfed farming with the object of helping farmers to withstand the pressures of recurring drought. (At this stage the members belonging to Rajya Raitha Sangha staged a walk-out.)

HIS EXCELLENCY THE GOVERNOR:- In this context, it is programmed to cover about 1,44,000 hectares under the Water Shed Development Programme. Further steps will be taken to popularise the use fo sprinkler and dript irrigation systems to ensure optimal use of the scarce resource of water.

23. The State is endowed with a conducive environment for the production of fruits, vegetables, plantation crops, commercial flowers, medicinal and aromatic plants. But the potential is not fully realised owing to certain constraints, like inadequate availability of planting material and credit, and inadequacies in the support services in the areas of post-harvest handling facilities for marketing. My Government will seek to remove these constraints to provide impetus to horticulture development through major policy initiatives.

24. As a part of the poverty alleviation measures, my Government will expand the scope of schemes like Sheep and Wool Development, Poultry Development, Piggery Development etc. In the Dairy sector, my Government plans to strengthen the activities of Dairy Co-operatives during the next year by enrolling 30,000 new members and by commissioning new dairies.

25. Our Programme for increasing fish production and for improving the welfare of fishermen will be strengthened further. My Government would particularly like to encourage Brackish Water Fish Farming. A beginning has been made in the Districts of Dakshina Kannada and Uttara Kannada by alloting 175 hectares of land to individual fishermen, Fishermen Co-operative

Societies and enterpreneurs. My Government will also, expand the scope of the welfare schemes for fishermen like the provision of houses and other civic amenities for them.

26. Forests constitute a crucial part of ecology. While afforestation needs to be promoted aggressively, we realise this can be achieved only by involving the people on a large scale. It is, therefore, proposed to launch a scheme called "Forest Management by Participation of the People". This will be part of the overall strategy for proper implementation of the Western Ghats Forestry and Environment Project which is being implemented with the assistance of Overseas Development Administration (ODA) of the United Kingdom.

27. In the area of Health and Family Welfare Services, my Government will emphasise the preventive aspects of the Health-care Programme particularly in the Rural and Semi-urban areas. In this connection, we intend to pay special attention to the improvement of rural sanitation. Under the Family Welfare Programme, importance will be given to better coverage so as to reduce the birth-rate in the state more effectively. Steps will be taken to fill up vacancies in the Department so that doctors and para-medical staff are available in the hospitals.

28. My Government considers provision of shelters especially to the weaker sections, an area of vital importance. A Master Plan will be prepared to fulfill this basic need to the siteless and shelterless families in rural and urban areas in the shortest possible time.

29. My Government attaches the highest importance to the various welfare measures for the Scheduled Castes and Scheduled Tribes. It will be its endeavour to ensure that the policy of reservation is strictly enforced so that these deprived sections are able to enjoy the rights guaranteed to them under the Constitution. My Government if fully committed to the welfare of socially and educationally backward classes and is deeply concerned about the delay in implementation of the recommendations of Justice Chinnappa Reddy Commission. We intend to take an appropriate decision in this regard shortly.

30. In the area of Rural Development, my Government will continue to emphasise proper implementation of programmes like, Integrated Rural Development to bring the families, who are still below the poverty line, with an annual income of less than Rs.11,000, above that level. The wage employment-oriented programme, i.e. Jawahar Rozgar Yojana will be vigorously implemented and steps will be taken to ensure that the benefits under the special activities like Indira Awas Yojana for construction of houses for

Scheduled Castes/Scheduled Tribes actually accure to them. Both for rural drinking water schemes and rural sanitation, special schemes are being taken up with the assistance from the Worlk Bank, DANIDA and the Government of Netherlands. My Government intends to pay special attention to the problem village with high fluoride or brackish drinking water sources.

31. I would like to reiterate the full faith of my Government in the decentralised form of Government. For further and more effective devolution of powers to the Panchayath Raj institutions, my Government intends to introduce comprehensive legislation for a three-tier directly elected Panchayath Raj frame work in line with the 73rd Amendment to the Constitution, which was passed recently by the Indian parliament. Elections to these Panchayath Raj Institutions will be held as early as possible during 1993. I am confident that with greater direct involvement of the people at all three levels of Village. Taluk and District, rural development will be put on a firmer footing.

32. Honourable Members, you have a heavy agenda before you. Apart from legislative measures, you will also be considering the Budget for the next financial year. I am certian, that in all your deliberations you will keep in mind, the welfare of the people of Karnataka who have resposed their faith and trust in you. I wish you all success in your deliberations.

JAI HIND JAI KARNATAKA

ಶ್ರೀ ವಾಟಾಳ್ ನಾಗರಾಜ್:- ಇದು ಜನವಿರೋಧಿ ಭಾಷಣ ಕನ್ನಡಿಗರ ವಿರೋಧಿ ಭಾಷಣ

ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಕನ್ನಡ ಭಾಷಾಂತರ

ಸನ್ಮಾನ್ಯ ಸಭಾಧ್ಯಕ್ಷರೇ, ಸನ್ಮಾನ್ಯ ಸಭಾಪತಿಯವರೇ ಮತ್ತು ಮಾನ್ಯ ಸದಸ್ಯರೇ,

ರಾಜ್ಯ ವಿಧಾನಮಂಡಲದ ಈ ಅಧಿವೇಶನಕ್ಕೆ ನಿಮ್ಮನ್ನು ಸ್ವಾಗತಿಸಲು ನನಗೆ ಅತೀವ ಸಂತೋಷವೆನಿಸುತ್ತದೆ. ಭಾರತದ ಅತ್ಯಂತ ಪ್ರಗತಿಶೀಲ ರಾಜ್ಯಗಳಲ್ಲಿ ಒಂದಾದ ಕರ್ನಾಟಕ ರಾಜ್ಯದ ರಾಜ್ಯಪಾಲನಾಗಿ ಈ ರಾಜ್ಯದ ಜನತೆಗೆ ಸೇವೆ ಸಲ್ಲಿಸುವ ಸದವಕಾಶ ದೊರೆತಿರುವುದು ನನಗೆ ಸಂದ ಗೌರವವೆಂದು ನಾನು ಭಾವಿಸುತ್ತೇನೆ.

2. ಮಾನ್ಯ ಸದಸ್ಯರೆ, ಸ್ವತಂತ್ರ ಇತಿಹಾಸದಲ್ಲಿಯೇ ಅತ್ಯಂತ ದುರಂತಕರವಾದ ಘಟನೆಗಳಲ್ಲೊಂದು, ಅಯೋಧ್ಯೆಯಲ್ಲಿ 1992ರ ಡಿಸೆಂಬರ್ 6ರಂದು ಸಂಭವಿಸಿತು. ನಮ್ಮ ರಾಷ್ಟ್ರದ ಸರ್ವಧರ್ಮ ಸಮಭಾವದ ಭದ್ರ ಬುನಾದಿಯೇ ಅಲುಗಾಡಿ ಹೋಗಿರುವುದು, ಅಯೋಧ್ಯೆಯ ದುರಂತ ಘಟನೆಗಳ ಭೀಕರ ಪರಿಣಾಮಗಳಲ್ಲಿ ಒಂದು. ರಾಷ್ಟ್ರದ ಹಲವಾರು ಸ್ಥಳಗಳಲ್ಲಿ ಅಧಿಕ ಪ್ರಮಾಣದಲ್ಲಿ ಗುಂಪು ಘರ್ಷಣೆಗಳು, ಹಿಂಸಾಕೃತ್ಯಗಳು ಹಾಗೂ ಗಲಭೆಗಳು ನಡೆದುವು. ಶಾಂತಿಪ್ರಿಯ ರಾಜ್ಯವಾದ ಕರ್ನಾಟಕದ, ಸಂಯಮ ಹಾಗೂ ಆತ್ಮೀಯತೆಗೆ ಹೆಸರಾದ ಜನತೆಯೂ ಸಹ ಈ ಗಲಭೆಯ ದಳ್ಳುರಿಗೆ ಸಿಲುಕಿದ್ದು ನಿಜಕ್ಕೂ ದುರದೃಷ್ಟಕರ. ನಮ್ಮ ರಾಜ್ಯದ ಕೆಲವು ಪ್ರದೇಶಗಳಲ್ಲಿ, ಅದರಲ್ಲೂ ವಿಶೇಷವಾಗಿ ಬೆಂಗಳೂರು, ಮೈಸೂರು,

ಹುಬ್ಬಳ್ಳಿ-ಧಾರವಾಡ, ಗುಲ್ಬರ್ಗ ಹಾಗೂ ಮಂಗಳೂರಿನ ಹೊರವಲಯಗಳಲ್ಲಿ ಕೋಮು ಗಲಭೆಗಳು ಸಂಭವಿಸಿದುವು. ಕೋಮು ಹಿಂಸಾಚಾರವನ್ನು ನಿಯಂತ್ರಿಸಲು ನನ್ನ ಸರ್ಕಾರ ತಕ್ಷಣ ಕ್ರಮಗಳನ್ನು ಕೈಗೊಂಡಿತು. ಅದರ ಪರಿಣಾಮದ ತೀವ್ರತೆಯ ಪ್ರಮಾಣ ಕಡಿಮೆಯಾಗುವಂತೆ ನೋಡಿಕೊಂಡಿತು. ನನ್ನ ಸರ್ಕಾರ ಕೈಗೊಂಡ ಕಟ್ಟುನಿಟ್ಟಿನ ಕ್ರಮಗಳಿಂದಲೇ ಹಿಂಸಾಚಾರ ಮತ್ತಷ್ಟು ಹರಡದಂತೆ ನಿಯಂತ್ರಿಸಲು ಸಾಧ್ಯವಾಯಿತು. ಈ ಸಂದರ್ಭದಲ್ಲಿ, ನಮ್ಮ ಪೋಲೀಸು ದಳಗಳು ವಹಿಸಿದ ಪಾತ್ರ ಪ್ರಶಂಸಾರ್ಹವಾದುದಾಗಿತ್ತು. ಮೃತರ ಕುಟುಂಬಗಳಿಗೆ ನೀಡುವ ಪರಿಹಾರಧನದ ಮೊಬಲಗನ್ನು ನನ್ನ ಸರ್ಕಾರ 50,000 ರೂ.ಗಳಿಂದ ಎರಡು ಲಕ್ಷ ರೂ.ಗಳಿಗೆ ಏರಿಸಿದೆ. ಗಾಯಗೊಂಡ ಪ್ರತಿವ್ಯಕ್ತಿಗೆ 15,000 ರೂ.ಗಳಂತೆ ಪರಿಹಾರವನ್ನು ನೀಡಲಾಗಿದೆ. ಶಾಶ್ವತವಾಗಿ ಅಸಮರ್ಥತಗೊಳಗಾದ ಹಾಗೂ ಯಾವುದೇ ಜೀವನೋಪಾಯ ಇಲ್ಲದಂತಹ ಯಾವುದೇ ವ್ಯಕ್ತಿ 250 ರೂ.ಗಳ ಮಾಸಾಶನ ಪಡೆಯಲು ಅರ್ಹನಾಗುತ್ತಾನೆ. ಕೋಮು ಗಲಭೆಗಳಲ್ಲಿ ಮೃತಪಟ್ಟ ವ್ಯಕ್ತಿಯ ವಿಧವೆಗೆ ಅಥವಾ ಆ ಕುಟುಂಬದ ಯಾವುದೇ ವ್ಯಕ್ತಿಗೆ ಉದ್ಯೋಗ ನೀಡುವ ಒಂದು ಯೋಜನೆಯನ್ನು ಸಹ ಹಮ್ಮಿಕೊಳ್ಳಲಾಗಿದೆ. ಆಸ್ತಿಪಾಸ್ತಿ ಕಳೆದುಕೊಂಡವರಿಗೆ 20,000 ರೂ.ಗಳವರೆಗೆ ಪರಿಹಾರ ಒದಗಿಸಲಾಗಿದೆ. ಅದಲ್ಲದೆ, ಪುನರ್ವಸತಿಗಾಗಿ ಬ್ಯಾಂಕುಗಳಿಂದ ಪಡೆಯುವ ಸಾಲಗಳ ಮೇಲಿನ ಬಡ್ಡಿಗೆ ಸಹಾಯಧನವನ್ನೂ ಒದಗಿಸಲಾಗುವುದು.

3. ನನ್ನ ಸರ್ಕಾರವು ಎಲ್ಲಾ ಬಗೆಯ ಕೋಮು ಗಲಭೆಗಳನ್ನು ಹತ್ತಿಕ್ಕುವ ಮತ್ತು ಅವು ಮರುಕಳಿಸದಂತೆ ನೋಡಿಕೊಳ್ಳುವ ತನ್ನ ದೃಢನಿರ್ಧಾರವನ್ನು ಪುನರುಚ್ಚರಿಸಬಯಸುತ್ತದೆ. ಸಂಕುಚಿತ, ಅಲ್ಪಕಾಲದ ಲಾಭಪಡೆಯುವ ಸಲುವಾಗಿ ವಿವಿಧ ಕೋಮುಗಳ ನಡುವೆ ದ್ವೇಷ ಹಾಗೂ ಸಂಶಯದ ವಿಷಬೀಜ ಬಿತ್ತುವಂಥ ಕೋಮು ಶಕ್ತಿಗಳ ವಿರುದ್ಧ ನಮ್ಮ ಅವಿರತ ಹೋರಾಟ ಮುಂದುವರಿಯುತ್ತದೆ. ಕೋಮು ಹಾಗೂ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಕ್ರಮಗಳನ್ನು ಕೈಗೊಳ್ಳಲು ನನ್ನ ಸರ್ಕಾರದ ಪ್ರತಿಬಂಧಕ ಸ್ಥಾನಬದ್ಧತೆಯ ಅಧಿನಿಯಮದ ಉಪಬಂಧಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳುತ್ತದೆ. ವಿಚ್ಛಿದ್ರಕಾರಿ ಹಾಗೂ ರಾಷ್ಟ್ರ ವಿರೋಧಿ ಚಟುವಟಿಕೆಗಳಲ್ಲಿ ನಿರತರಾಗಿರುವವರ ವಿರುದ್ಧ ನನ್ನ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತದೆ.

4. ಮಾನ್ಯ ಸದಸ್ಯರೆ, ನನ್ನ ಸರ್ಕಾರ ಸಂಘಟಿಸಿದ್ದ ಕೋಮು ಸೌಹಾರ್ದತಾ ಸಪ್ತಾಹದ ಕರೆಗೆ ಕರ್ನಾಟಕದ ಜನರು ಅಭೂತಪೂರ್ವ ಪ್ರತಿಕ್ರಿಯೆ ತೋರಿದ ಸಂಗತಿಯನ್ನು ನಿಮಗೆ ತಿಳಿಸಲು ನನಗೆ ಸಂತೋಷವಾಗುತ್ತದೆ. ರಾಜ್ಯದ ವಿವಿಧ ಭಾಗಗಳಲ್ಲಿ ಮಾನವ ಸರಪಳಿಯನ್ನು ರಚಿಸಿದ್ದು ಹಾಗೂ ಕೋಮು ಸೌಹಾರ್ದತೆಯನ್ನು ಕಾಪಾಡುವುದಾಗಿ ಮತ್ತು ಸರ್ವಧರ್ಮ ಸಮಭಾವವನ್ನು ಎತ್ತಿ ಹಿಡಿಯುವುದಾಗಿ ಜನರು ಪ್ರತಿಜ್ಞಾವಚನ ಸ್ವೀಕರಿಸಿದ್ದು ಒಂದು ವೈಶಿಷ್ಟ್ಯ ಪೂರ್ಣ ಅಂಶ. ನಮ್ಮ ಜನರ ಪ್ರಚಂಡ ಹಾಗೂ ಉತ್ಸಾಹಭರಿತ ಪ್ರತಿಕ್ರಿಯೆಯು, ಇಲ್ಲಿ ಸೇರಿರುವ ನಮ್ಮೆಲ್ಲರಿಗೂ ಪವಿತ್ರವಾದಂಥ ನಮ್ಮ ಸಂವಿಧಾನದ ಮೂಲಭೂತ ಆದರ್ಶಗಳನ್ನು ಎತ್ತಿಹಿಡಿಯಲು ಬಹು ಜನರು ಕೈಗೊಂಡ ನಿರ್ಣಯದ ಸ್ಪಷ್ಟ ಸಂಕೇತವಾಗಿದೆ. ನನ್ನ ಸರ್ಕಾರವು ಕೋಮುವಾದ, ರಾಜಕೀಯದಲ್ಲಿ ಧರ್ಮದ ಹಸ್ತಕ್ಷೇಪ ಮತ್ತು ಸಂಕುಚಿತ ಸಮಯ ಸಾಧಕತನಗಳ ವಿರುದ್ಧದ ಹೋರಾಟದಲ್ಲಿ ಜನರನ್ನು ತೊಡಗಿಸಲು ಬೇಕಾದ ಎಲ್ಲಾ ಪ್ರಯತ್ನಗಳನ್ನು ಮುಂದುವರಿಸುತ್ತದೆ. ಸರ್ವಧರ್ಮ ಸಮಭಾವದ ನಮ್ಮ ಪ್ರಜಾಪ್ರಭುತ್ವದ ಆಸ್ತಿಭಾರವನ್ನು ನಾಶಗೊಳಿಸಲು ಪ್ರಯತ್ನಿಸುತ್ತಿರುವ ಹಾದಿ ತಪ್ಪಿದ ಈ ಶಕ್ತಿಗಳ ಸಂಚುಗಳನ್ನು ನಿಷ್ಫಲಗೊಳಿಸುವ ದಿಶೆಯಲ್ಲಿ ಇಂದು ಜನಾಂದೋಲನದ ಅಗತ್ಯತೆ ಇದೆ.

5. ಗಂಭೀರ ಸ್ವರೂಪದ ಕೋಮು ಗಲಭೆಯ ಪರಿಸ್ಥಿತಿಗಳನ್ನು ಮತ್ತು ಇತರ ತೀವ್ರ ತುರ್ತು ಸನ್ನಿವೇಶಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಲು ಭಾರತ ಸರ್ಕಾರವು ಇತ್ತೀಚೆಗೆ

ರಚಿಸಿರುವ ಕ್ಷಿಪ್ರ ಕಾರ್ಯಾಚರಣೆ ದಳದ ಮಾದರಿಯಲ್ಲಿ ವಿಶೇಷ ಕಾರ್ಯಾಚರಣೆ ದಳವೊಂದನ್ನು ರಚಿಸಲು ಉದ್ದೇಶಿಸಲಾಗಿದೆ. ತನಗೆ ವಹಿಸಿದ ಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಈ ದಳಕ್ಕೆ ವಿಶೇಷ ತರಬೇತಿಯನ್ನು ನೀಡಲಾಗುವುದು.

6. ಮಹಿಳೆಯರು ಶೋಷಣೆ ಮತ್ತು ತಾರತಮ್ಯಗಳಿಗೆ ಒಳಗಾಗದಂತೆ ಅವರನ್ನು ರಕ್ಷಿಸುವುದು ಆದ್ಯಕರ್ತವ್ಯವೆಂದು ನನ್ನ ಸರ್ಕಾರ ಭಾವಿಸಿದೆ. ಈ ಧ್ಯೇಯವನ್ನು ದೃಷ್ಟಿಯಲ್ಲಿಟ್ಟು ಕೊಂಡು, ಮಹಿಳೆಯರ ಹಕ್ಕುಗಳ ರಕ್ಷಣೆಗಾಗಿ ಪೊಲೀಸು ಇಲಾಖೆಯಲ್ಲಿರುವ ವಿಭಾಗವನ್ನು ಬಲಪಡಿಸಲು ಉದ್ದೇಶಿಸಲಾಗಿದೆ. ಅತ್ಯಾಚಾರ, ವರದಕ್ಷಿಣೆ ಸಾವುಗಳು, ಮಹಿಳೆಯರ ಅಪಹರಣ ಮತ್ತು ಮಹಿಳೆಯರಿಗೆ ನೀಡಲಾಗುವ ಕಿರುಕುಳಗಳ ಬಗ್ಗೆ ಈ ವಿಭಾಗ ವ್ಯವಹರಿಸುತ್ತಿದೆ. ಅಲ್ಲದೆ, ಈ ವಿಭಾಗವು ಕಾನೂನಿನ ಮೇರೆಗೆ ಮಹಿಳೆಯರಿಗೆ ದೊರೆಯುವ ಹಕ್ಕುಗಳು ಹಾಗೂ ರಕ್ಷಣೆಗಳ ಬಗ್ಗೆ ಸಲಹೆ ನೀಡುವ ಕೇಂದ್ರವಾಗಿಯೂ ಕಾರ್ಯ ನಿರ್ವಹಿಸುತ್ತಿದೆ. ಸಾಮಾನ್ಯವಾಗಿ ಮಹಿಳೆಯರು ಪೊಲೀಸು ಠಾಣೆಗಳಿಗೆ ಬರಲು ಹಿಂಜರಿಯುತ್ತಾರೆಂಬ ಅಂಶವನ್ನು ದೃಷ್ಟಿಯಲ್ಲಿ ಇಟ್ಟು ಕೊಂಡು ಪೂರ್ಣವಾಗಿ ಮಹಿಳಾ ಸಿಬ್ಬಂದಿಯೇ ಇರುವಂಥ ಪೋಲೀಸು ಠಾಣೆಯನ್ನು ಸ್ಥಾಪಿಸಲು ಯೋಜಿಸಲಾಗಿದೆ. ಮೊದಲಿಗೆ, ಬೆಂಗಳೂರಿನಲ್ಲಿ ಅಂಥ ಒಂದು ಪೋಲೀಸು ಠಾಣೆಯನ್ನು ಸ್ಥಾಪಿಸಲಾಗುವುದು ಹಾಗೂ ಕಾಲಕ್ರಮದಲ್ಲಿ ಇತರ ನಗರಗಳಲ್ಲೂ ಇಂಥ ಠಾಣೆಗಳನ್ನು ಸ್ಥಾಪಿಸಲಾಗುವುದು.

7. ದಿವಂಗತ ಶ್ರೀಮತಿ ಇಂದಿರಾಗಾಂಧಿಯವರ ಸಮರ್ಥ ಮಾರ್ಗದರ್ಶನದಲ್ಲಿ ಪ್ರಾರಂಭಿಸಲಾಗಿದ್ದ ಮತ್ತು ಪ್ರಧಾನಮಂತ್ರಿಗಳಾದ ಸನ್ಮಾನ್ಯ ಶ್ರೀ ಪಿ.ವಿ. ನರಸಿಂಹರಾವ್ ಅವರು ಉತ್ಸಾಹಪೂರ್ಣವಾಗಿ ಮುಂದುವರಿಸುತ್ತಿರುವ ಅಲ್ಪಸಂಖ್ಯಾತರ ಕಲ್ಯಾಣಕ್ಕೆ ಸಂಬಂಧಿಸಿದ 15 ಅಂಶಗಳ ಕಾರ್ಯಕ್ರಮದ ಅನುಷ್ಠಾನಕ್ಕೆ ನನ್ನ ಸರ್ಕಾರವು ಅತ್ಯಂತ ಹೆಚ್ಚಿದ ಆದ್ಯತೆ ನೀಡಿದೆ. ಈ ಕಾರ್ಯಕ್ರಮದನ್ವಯ, ನನ್ನ ಸರ್ಕಾರವು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಹಾಗೂ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ನಿರ್ದೇಶನಾಲಯದ ಕಾರ್ಯಚಟುವಟಿಕೆಗಳನ್ನು ಬಲಪಡಿಸಿ ಅವುಗಳನ್ನು ಮತ್ತಷ್ಟು ವಿಸ್ತರಿಸುತ್ತಿದೆ. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಸ್ವಾವಲಂಬನ ಯೋಜನೆಯ ಮೇರೆಗೆ, ಬ್ಯಾಂಕಿನಿಂದ ಸಾಲ ಪಡೆದುಕೊಳ್ಳುವವರಿಗೆ, ಸುಲಭ ಕಂತುಗಳ ಮತ್ತು ಕಡಿಮೆ ಬಡ್ಡಿ ದರದ ಸೌಲಭ್ಯದೊಂದಿಗೆ ಮೂಲಧನವನ್ನು ಒದಗಿಸಲಾಗಿದೆ. ವಕ್ಫ್ ಸಂಸ್ಥೆಗಳ ನಿರ್ವಹಣೆ ಹಾಗೂ ಹೆಚ್ಚಿನ ಅಭಿವೃದ್ಧಿಗಾಗಿ ಆರ್ಥಿಕವಾಗಿ ಸಮರ್ಥವಾದ ಯೋಜನೆಗಳನ್ನು ಕೈಗೊಳ್ಳಲು ಈ ಸಂಸ್ಥೆಗಳಿಗೆ ಮುಂಗಡ ಸಾಲ ನೀಡುವುದಕ್ಕಾಗಿ 60.00 ಲಕ್ಷ ರೂಪಾಯಿಗಳ ಆವರ್ತಕ ನಿಧಿಯೊಡನೆ ಕರ್ನಾಟಕ ರಾಜ್ಯ ವಕ್ಫ್‌ಗಳ ಪರಿಷತ್ತನ್ನು ಈಗಾಗಲೇ ರಚಿಸಲಾಗಿದೆ. ಮುಸ್ಲಿಂ ಮಹಿಳೆಯರಿಗೆ ಶಿಕ್ಷಣ ಮತ್ತು ಸ್ವಯಂ ಉದ್ಯೋಗ ಕ್ಷೇತ್ರದಲ್ಲಿ ಉತ್ತೇಜನ ನೀಡುವುದಕ್ಕಾಗಿ ಮಹಿಳಾ ಅಭಿವೃದ್ಧಿ ಕುರಿತ ಕರ್ನಾಟಕ ರಾಜ್ಯ ವಕ್ಫ್ ಪ್ರತಿಷ್ಠಾನವೊಂದನ್ನು ರಚಿಸಲಾಗಿದೆ. ಗೃಹ ಹಾಗೂ ಕುಟೀರೋದ್ಯಮಗಳಲ್ಲಿ ತೊಡಗಿರುವ ಮುಸ್ಲಿಂ ಮಹಿಳೆಯರ ಕೆಲಸದ ಸ್ಥಿತಿಗತಿಗಳನ್ನು ಸುಧಾರಿಸುವುದಕ್ಕಾಗಿಯೂ ಈ ಪ್ರತಿಷ್ಠಾನದ ವ್ಯಾಪ್ತಿಯಲ್ಲಿ ಏರ್ಪಾಡುಗಳನ್ನು ಮಾಡಲಾಗಿದೆ. ಈ ನಿಲುವಿಗನುಗುಣವಾಗಿ, ರಾಜ್ಯದ ಅಲ್ಪಸಂಖ್ಯಾತರ ಆಯೋಗದ ಪರಿಶೀಲನಾಂಶಗಳನ್ನು ಸಾಕಷ್ಟು ವ್ಯಾಪಕಗೊಳಿಸಲಾಗಿದೆ.

8. ರಾಜ್ಯದ ಕೆಲವು ಪ್ರದೇಶಗಳ, ಅದರಲ್ಲೂ ಮುಖ್ಯವಾಗಿ ರಾಯಚೂರು, ಬಳ್ಳಾರಿ ಜಿಲ್ಲೆಗಳ ಹಾಗೂ ಧಾರವಾಡ ಜಿಲ್ಲೆಯ ಕೆಲವು ಭಾಗಗಳ ಜನರು, ಚಂಡಮಾರುತದ ಹಾವಳಿಯಿಂದುಂಟಾದ ಪ್ರವಾಹದ ಪರಿಣಾಮವಾಗಿ ಬಹಳಷ್ಟು ಭೂಭಾಗಗಳು ಹಾಗೂ ಗ್ರಾಮಗಳು ಅಪಾರ ಹಾನಿಗೀಡಾದ್ದರಿಂದ ತೊಂದರೆಗೊಳಗಾದ ವಿಷಯವು ಮಾನ್ಯ ಸದಸ್ಯರಿಗೆ ತಿಳಿದೇ ಇದೆ. 98 ಜನರು ಅಸುನೀಗಿದ್ದಲ್ಲದೆ ಜಾನುವಾರು, ಜಮೀನುಗಳು ಮತ್ತು

ಮೂಲಭೂತ ಸೌಲಭ್ಯಗಳಾದ ರಸ್ತೆಗಳು ಹಾಗೂ ಸೇತುವೆಗಳು, ಸಂಪರ್ಕ ಮಾರ್ಗಗಳು ಮತ್ತು ಮನೆಗಳು ಮುಂತಾದವುಗಳಿಗೆ ಅಪಾರ ಹಾನಿಯುಂಟಾಯಿತು. ಈ ಪರಿಸ್ಥಿತಿಗೆ ನನ್ನ ಸರ್ಕಾರ ತ್ವರಿತ ಹಾಗೂ ಕಳಕಳಿಯ ಪ್ರತಿಕ್ರಿಯೆ ತೋರಿತು. ರಾಯಚೂರು, ಬಳ್ಳಾರಿ, ಧಾರವಾಡ, ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಮೈಸೂರು ಈ 7 ಜಿಲ್ಲೆಗಳಲ್ಲಿ ಪ್ರಕೃತಿ ವಿಕೋಪದಿಂದ ತೊಂದರೆಗೊಳಗಾದವರಿಗೆ ಪರಿಹಾರ ನೀಡಲು 53 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಪ್ರಧಾನಮಂತ್ರಿಗಳ ಸೂಚನೆ ಮೇರೆಗೆ ಭಾರತ ಸರ್ಕಾರವು ಈ ಉದ್ದೇಶಕ್ಕಾಗಿ, ಗಣನೀಯವಾಗಿ, ಮಾರ್ಗೋಪಾಯ ಮುಂಗಡ ಹಣವನ್ನು ಬಿಡುಗಡೆ ಮಾಡಿದೆ.

9. ಸ್ವಚ್ಛ ಆಡಳಿತ ನೀಡಲು ಮತ್ತು ಆಡಳಿತ ವ್ಯವಸ್ಥೆಯಲ್ಲಿ ವಿಶ್ವಾಸಾರ್ಹತೆ ಹಾಗೂ ಪ್ರಾಮಾಣಿಕತೆ ಮೂಡಿಸಲು ನನ್ನ ಸರ್ಕಾರವು ಪ್ರಯತ್ನಿಸುತ್ತದೆ. ಕರ್ತವ್ಯನಿಷ್ಠೆ ಹಾಗೂ ದಕ್ಷತೆಯನ್ನು ರೂಢಿಸಿಕೊಳ್ಳಲು ಅಸಮರ್ಥರಾದವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಂಥ ಮತ್ತು ಪ್ರಾಮಾಣಿಕ ಹಾಗೂ ದಕ್ಷ ಸರ್ಕಾರಿ ನೌಕರರಿಗೆ ಅವರ ಕಾರ್ಯಕ್ಷೇತ್ರದಲ್ಲಿ ಉತ್ಕೃಷ್ಟತೆ ಸಾಧಿಸಲು ಅಗತ್ಯವಾದ ಎಲ್ಲಾ ಪ್ರೋತ್ಸಾಹಗಳನ್ನು ನೀಡುವಂಥ ಹೊಸ ಆಡಳಿತಾತ್ಮಕ ಸಂಸ್ಕೃತಿಯೊಂದನ್ನು ಬೆಳೆಸಲಾಗುವುದು. ನನ್ನ ಸರ್ಕಾರವು ಹಾಕಿಕೊಂಡಿರುವ ಈ ಗುರಿಗಳನ್ನು ಸಾಧಿಸಲು ಮತ್ತು ವಿವಿಧ ಕಾರ್ಯಕ್ರಮಗಳು ಹಾಗೂ ಯೋಜನೆಗಳನ್ನು ಪರಿಣಾಮಕಾರಿಯಾಗಿ ಮತ್ತು ಕಾಲಬದ್ಧ ವಿಧಾನದಲ್ಲಿ ಜಾರಿಗೊಳಿಸಲು ಆಡಳಿತದಲ್ಲಿ ಕೆಲವು ನಿರ್ಣಾಯಕ ಪರಿಕಲ್ಪನೆಗಳನ್ನು ರೂಪಿಸಿ, ಅವುಗಳನ್ನು ಜಾರಿಗೊಳಿಸಲು ನಾವು ಉದ್ದೇಶಿಸಿದ್ದೇವೆ. ಗುರಿಸಾಧನೆಗಾಗಿ ವಿವಿಧ ಹಂತಗಳಲ್ಲಿ, ಸರ್ಕಾರಿ ಅಧಿಕಾರಿಗಳಿಗೆ ಸಾಕಷ್ಟು ಅಧಿಕಾರವನ್ನು ವಹಿಸಿ ಕೊಡಬೇಕಾಗುತ್ತದೆಂಬುದನ್ನು ನನ್ನ ಸರ್ಕಾರ ಮನಗಂಡಿದೆ. ಈ ನಿರ್ದಿಷ್ಟ ಧ್ಯೇಯ ಮತ್ತು ಗುರಿಗಳನ್ನು ಸಾಧಿಸುವ ಉದ್ದೇಶಕ್ಕಾಗಿ ಅಧಿಕಾರಿಗಳು ತಮ್ಮ ಅಧಿಕಾರವನ್ನು ಚಲಾಯಿಸಬೇಕೆಂದು ನನ್ನ ಸರ್ಕಾರವು ಒತ್ತಾಯಿಸುತ್ತದೆ. ಅಲ್ಲದೆ, ಈ ಅಧಿಕಾರದ ಚಲಾವಣೆಯಿಂದ ಸಮ ಪ್ರಮಾಣದ ಸಾಧನೆ ಕಂಡುಬರುವಂತಾಗಲು ನನ್ನ ಸರ್ಕಾರವು ಎಲ್ಲ ಹಂತಗಳಲ್ಲಿ ಹೊಣೆಗಾರಿಕೆಯನ್ನು ನಿಗದಿಪಡಿಸುತ್ತದೆ. ಧಾರವಾಡ, ಗುಲ್ಬರ್ಗಾ ಮತ್ತು ಮಂಗಳೂರುಗಳಲ್ಲಿ ಲೋಕಾಯುಕ್ತ ಶಾಖೆಗಳನ್ನು ಸ್ಥಾಪಿಸಿ ಬೆಂಗಳೂರು, ಧಾರವಾಡ, ಗುಲ್ಬರ್ಗಾ ಹಾಗೂ ಮಂಗಳೂರುಗಳಲ್ಲಿ ವಿಶೇಷ ನ್ಯಾಯಾಧೀಶರನ್ನು ನೇಮಿಸುವ ಮೂಲಕ ಭ್ರಷ್ಟಾಚಾರ ನಿಷೇಧ ಅಧಿನಿಯಮ, 1988ರ ಮೇರೆಗೆ ಮೊಕದ್ದಮೆಗಳನ್ನು ದೈನಂದಿನ ಆಧಾರದ ಮೇಲೆ ವಿಚಾರಣೆ ನಡೆಸಿ ತ್ವರಿತವಾಗಿ ವಿಲೆ ಮಾಡಲು ಸಾಧ್ಯವಾಗುವಂತೆ ಲೋಕಾಯುಕ್ತ ಸಂಸ್ಥೆಯನ್ನು ಬಲಪಡಿಸಲು ಸಹ ನನ್ನ ಸರ್ಕಾರವು ಉದ್ದೇಶಿಸಿದೆ. ಅನೇಕ ಸಲ ದೀರ್ಘಕಾಲದವರೆಗೆ ಎಳೆದಾಡುವ, ಕೇವಲ ದುರ್ನಡತೆಯ ಪ್ರಕರಣಗಳ ವಿಲೆವಾರಿಗೆ ಹಾಗೂ ದುರ್ನಡತೆ ಪ್ರಕರಣಗಳು ಬೆಳಕಿಗೆ ಬಂದ ತಕ್ಷಣವೇ ಲಘು ದಂಡನೆಗಳನ್ನು ವಿಧಿಸಲು ಅನುವು ಮಾಡಿಕೊಡುವಂತೆ ಕಾರ್ಯವಿಧಾನವನ್ನು ಸರಳಗೊಳಿಸಲಾಗುವುದು.

10. ಸಾರ್ವಜನಿಕರ ಕುಂದುಕೊರತೆಗಳ ಪರಿಹಾರಕ್ಕೆ ನನ್ನ ಸರ್ಕಾರ ಅತಿ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತದೆ. ಈ ಸಮಸ್ಯೆಯ ಬಗ್ಗೆ ವ್ಯವಹರಿಸಲು ಎರಡು ಬಗೆಯ ಮಾರ್ಗಗಳನ್ನು ಅನುಸರಿಸಲು ಉದ್ದೇಶಿಸಲಾಗಿದೆ. ಸಾರ್ವಜನಿಕ ಕುಂದುಕೊರತೆಗೆ ಪರಿಹಾರ ದೊರೆಯದಿರುವುದಕ್ಕೆ ಸರ್ಕಾರಿ ಕಚೇರಿಗಳಲ್ಲಿ ಕಡತಗಳ ಮಂದಗತಿಯ ವಿಲೇವಾರಿಯೇ ಮುಖ್ಯ ಕಾರಣ. ಆದುದರಿಂದ, ರಾಜ್ಯದಾದ್ಯಂತ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ವಿಲೇವಾರಿಯ ಗತಿಯನ್ನು ಶೀಘ್ರಗೊಳಿಸಲು ವಿಶೇಷ ಗಮನ ನೀಡಲಾಗುವುದು. ಎರಡನೆಯದಾಗಿ, ಸಚಿವರುಗಳು ಮತ್ತು ಹಿರಿಯ ಅಧಿಕಾರಿಗಳು ವಿವಿಧ ಜಿಲ್ಲೆಗಳಿಗೆ ಪ್ರವಾಸ ಕೈಗೊಳ್ಳುವ ಅವಧಿಯಲ್ಲಿ ಸಾರ್ವಜನಿಕರ ಅಹವಾಲುಗಳನ್ನು ಕೇಳಲು ಒಂದು ನಿರ್ದಿಷ್ಟ ವೇಳೆಯನ್ನು ಮೀಸಲಿಡುತ್ತಾರೆ ಮತ್ತು ಸಾಧ್ಯವಾದಷ್ಟು ಮಟ್ಟಿಗೆ ತೊಂದರೆಗೊಳಗಾದ ವ್ಯಕ್ತಿಗಳಿಗೆ ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿಯೇ

ಪರಿಹಾರ ಒದಗಿಸುತ್ತಾರೆ. ಇದರಿಂದಾಗಿ ಜನರು ತಮ್ಮ ಕುಂದುಕೊರತೆಗಳಿಗೆ ಪರಿಹಾರ ಹುಡುಕಿಕೊಂಡು ದೂರದ ಸ್ಥಳಗಳಿಂದ ಬೆಂಗಳೂರಿಗೆ ಬರುವುದನ್ನು ತಪ್ಪಿಸಿದಂತಾಗುತ್ತದೆ.

11. ಕನ್ನಡವನ್ನು ಆಡಳಿತದ ಎಲ್ಲ ಹಂತಗಳಲ್ಲಿ ಬಳಕೆಗೆ ತರಲು ನನ್ನ ಸರ್ಕಾರವು ಬದ್ಧವಾಗಿದೆ. ಕನ್ನಡವು ಜಿಲ್ಲಾ ಮಟ್ಟದವರೆಗೆ ಮಾತ್ರವೇ ವ್ಯಾಪಕವಾಗಿ ಬಳಕೆಯಾಗುತ್ತಿದ್ದು, ರಾಜ್ಯ ಮಟ್ಟದಲ್ಲಿ ತೃಪ್ತಿಕರವಾಗಿ ಬಳಕೆಯಾಗುತ್ತಿಲ್ಲ ಎಂಬುದು ಆತಂಕದ ಸಂಗತಿಯಾಗಿದೆ. ಒಂದು ವರ್ಷದ ಅವಧಿಯೊಳಗೆ ರಾಜ್ಯ ಮಟ್ಟದಲ್ಲಿಯೂ ಕನ್ನಡವು ಆಡಳಿತ ಭಾಷೆಯಾಗಿ ಬಳಕೆಯಾಗುವಂತೆ ನೋಡಿಕೊಳ್ಳಲು ನಾವು ಅವಶ್ಯಕ ಕ್ರಮಗಳನ್ನು ಕೈಗೊಳ್ಳುತ್ತೇವೆ.

12. ಸರ್ಕಾರಿ ನೌಕರರಿಗೆ ಅವರ ಕೆಲಸ ಕಾರ್ಯಗಳಿಗೆ ಸಂಬಂಧಿಸಿದಂತೆ ಗುರಿಗಳನ್ನು ನಿಗದಿಪಡಿಸಲು ಮತ್ತು ಅವರು ಸಾಧಿಸಿದ ಪ್ರಗತಿಯನ್ನು ಪರಾಮರ್ಶಿಸುವ ಮೂಲಕ ಎಲ್ಲ ಹಂತಗಳಲ್ಲಿ ಅವರ ಕಾರ್ಯನಿರ್ವಹಣೆಯ ಮೌಲ್ಯಮಾಪನ ಮಾಡಲು ನನ್ನ ಸರ್ಕಾರ ಉದ್ದೇಶಿಸಿದೆ. ಸರ್ಕಾರಿ ನೌಕರರ ಜ್ಞಾನದ ಮಟ್ಟ ಮತ್ತು ಕೌಶಲ್ಯಗಳನ್ನು ಹೆಚ್ಚಿಸಲು ಹಾಗೂ ನ್ಯಾಯೋಚಿತ ಆಡಳಿತ ನೀಡುವಲ್ಲಿ ಅವರು ಹೊಣೆಗಾರರಾಗಿರುವಂತೆ ಮಾಡಲು ಅವರಿಗೆ ಸೂಕ್ತ ತರಬೇತಿ ನೀಡಲಾಗುವುದು ಮತ್ತು ರೀ-ಓರಿಯೆಂಟೇಶನ್ ಕೋರ್ಸುಗಳನ್ನು ನಡೆಸಲಾಗುವುದು. ಮೈಸೂರಿನಲ್ಲಿರುವ ಆಡಳಿತ ತರಬೇತಿ ಸಂಸ್ಥೆ ಮತ್ತು ಬೆಂಗಳೂರಿನಲ್ಲಿರುವ ಸಚಿವಾಲಯ ತರಬೇತಿ ಸಂಸ್ಥೆ ಇವೆರಡನ್ನೂ ಆಡಳಿತ ಸುಧಾರಣೆಗಳು ಮತ್ತು ತರಬೇತಿ ಮಹಾ ನಿರ್ದೇಶಕರ ಏಕೈಕ ಆಡಳಿತ ನಿಯಂತ್ರಣಕ್ಕೆ ವಹಿಸಿ ಎಲ್ಲ ಇಲಾಖೆಗಳ ಅಧೀನದಲ್ಲಿರುವ ಎಲ್ಲ ತರಬೇತಿ ಸಂಸ್ಥೆಗಳ ತರಬೇತಿ ಚಟುವಟಿಕೆಗಳ ಮೇಲ್ವಿಚಾರಣೆ ನಡೆಸುವ ಅಧಿಕಾರ ನೀಡಲಾಗುತ್ತದೆ. ಆಡಳಿತದಲ್ಲಿ ಉತ್ಕೃಷ್ಟತೆಯನ್ನು ಸಾಧಿಸುವ ಬಲವನ್ನು ನೌಕರರಲ್ಲಿ ಮೂಡಿಸುವ ಉದ್ದೇಶದಿಂದ ರಾಜ್ಯದಲ್ಲಿರುವ ಎಲ್ಲ ಹಂತದ ಸರ್ಕಾರಿ ನೌಕರರನ್ನು ಐದು ವರ್ಷಗಳ ಅವಧಿಯೊಳಗೆ ತರಬೇತುಗೊಳಿಸುವಂತಹ ಒಂದು ಯೋಜನೆಯನ್ನು ಮಹಾನಿರ್ದೇಶಕರು ರೂಪಿಸುತ್ತಾರೆ.

13. ರಾಜ್ಯದ ಜನತೆಯ ಏಳಿಗೆಗೆ ಮತ್ತು ರಾಜ್ಯದ ಮಾನವ ಸಂಪನ್ಮೂಲದ ಸೂಕ್ತ ಬಳಕೆಗೆ ಶಿಕ್ಷಣವು ಅತ್ಯಗತ್ಯ ಎಂದು ನನ್ನ ಸರ್ಕಾರವು ಭಾವಿಸಿದೆ. ಈ ಉದ್ದೇಶಕ್ಕಾಗಿ ಸಂಪೂರ್ಣ ಸಾಕ್ಷರತಾ ಆಂದೋಲನಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿ ಆಂದೋಲನದಲ್ಲಿ ಗ್ರಾಮೀಣ ಮಹಿಳೆಯರು ಪಾಲ್ಗೊಳ್ಳುವಂತೆ ಮಾಡಲು ಒತ್ತು ನೀಡಲಾಗುತ್ತದೆ. ಮುಂದಿನ ಎರಡು ವರ್ಷಗಳಲ್ಲಿ ಇಡೀ ರಾಜ್ಯದಲ್ಲಿ ಸಂಪೂರ್ಣ ಸಾಕ್ಷರತೆಯನ್ನು ಸಾಧಿಸಲು ನನ್ನ ಸರ್ಕಾರವು ಯೋಜಿಸಿದೆ.

14. ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವ ದೃಷ್ಟಿಯಿಂದ ನನ್ನ ಸರ್ಕಾರವು ಸಾರ್ವತ್ರಿಕ ದಾಖಲಾತಿ, ಸಾರ್ವತ್ರಿಕ ಸ್ಥಿರತೆ ಮತ್ತು ಸಾರ್ವತ್ರಿಕ ಗುರಿಯನ್ನು ಸಾಧಿಸಲು ಸತತ ಪ್ರಯತ್ನ ಮಾಡುತ್ತದೆ. ಪ್ರಾಥಮಿಕ ಶಿಕ್ಷಣದ ಗುಣಮಟ್ಟದ ಸುಧಾರಣೆಗಾಗಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು, ಯೂನಿಸೆಫ್ ಹಾಗೂ ಭಾರತ ಸರ್ಕಾರದ ಬೆಂಬಲದೊಡನೆ 1993-94ರಲ್ಲಿ ಕಾರ್ಯರೂಪಕ್ಕೆ ತರಲಿರುವ ''ಕಲಿಕೆಯ ಕನಿಷ್ಠ ಹಂತಗಳು'' ಎಂಬ ಹೊಸ ಕಾರ್ಯಕ್ರಮವನ್ನು ನಿರಂತರವಾಗಿ ವಿಸ್ತರಿಸಿಕೊಂಡು ಹೋಗಲಿವೆ.

15. ನನ್ನ ಸರ್ಕಾರವು ವೃತ್ತಿಪರ ಶಿಕ್ಷಣಕ್ಕೂ ಪ್ರಾಮುಖ್ಯತೆ ನೀಡುತ್ತದೆ. ಮುಂಬರುವ ಕೆಲವು ವರ್ಷಗಳಲ್ಲಿ, ಎಂದರೆ ಎಂಟನೆಯ ಪಂಚವಾರ್ಷಿಕ ಯೋಜನೆಯ ಮುಕ್ತಾಯದವರೆಗೆ, ವಿದ್ಯಾರ್ಥಿಗಳಿಗೆ +2 ಶಿಕ್ಷಣದ ಹಂತದಲ್ಲಿ 1200 ಹೊಸ ವ್ಯಾಸಂಗ ಕ್ರಮಗಳನ್ನು ಪ್ರಾರಂಭಿಸಲಾಗುತ್ತದೆ. +2 ಹಂತದ ಶಿಕ್ಷಣವನ್ನು ಪೂರ್ಣಗೊಳಿಸುವ ವಿದ್ಯಾರ್ಥಿಗಳಿಗೆ ಲಾಭದಾಯಕ ಮಜೂರಿ ದೊರೆಯುವ ಉದ್ಯೋಗವನ್ನು ಪಡೆಯುವುದಕ್ಕೆ ಅಥವಾ ಸ್ವಂತ ಉದ್ಯೋಗದಲ್ಲಿ ತೊಡಗುವುದಕ್ಕೆ ಸಾಧ್ಯವಾಗುವಂತೆ ಮಾಡುವುದೇ ಈ ಕಾರ್ಯಕ್ರಮದ

ಉದ್ದೇಶ. ಆಧುನಿಕ ಮತ್ತು ಲಾಭದಾಯಕವಾದ ತಾಂತ್ರಿಕ ವ್ಯಾಸಂಗ ಕ್ರಮಗಳನ್ನು ಅಧ್ಯಯನ ಮಾಡಲು ನನ್ನ ಸರ್ಕಾರವು ಮಹಿಳೆಯರಿಗೆ ಸಹ ಪ್ರೋತ್ಸಾಹ ನೀಡುತ್ತದೆ.

16. ವೃತ್ತಿ ಶಿಕ್ಷಣ ಕ್ಷೇತ್ರವು, ಪ್ರವೇಶಾವಕಾಶಗಳು ಹಾಗೂ ಅವಕ್ಕೆ ತರಬೇಕಾದ ಶುಲ್ಕಗಳಿಗೆ ಸಂಬಂಧಿಸಿದ ಸಮಸ್ಯೆಗಳಿಂದ ತುಂಬಿ ಹೋಗಿದೆ. ಅರ್ಹತೆಗೆ ತಕ್ಕ ಮಾನ್ಯತೆ ನೀಡುವ ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು, ಇತ್ತೀಚೆಗೆ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿಗೆ ಅನುಸಾರವಾಗಿ ಈ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶಾವಕಾಶಕ್ಕೆ ನಿಯಮಗಳನ್ನು ರೂಪಿಸಲು ನನ್ನ ಸರ್ಕಾರವು ಉದ್ದೇಶಿಸಿದೆ.

17. ಭಾರತ ಸರ್ಕಾರವು ಘೋಷಿಸಿರುವ ಉದಾರ ನೀತಿಗೆ ಅನುಸಾರವಾಗಿ, ಇನ್ನು ಮುಂದೆ ಕರ್ನಾಟಕದಲ್ಲಿ ನಮ್ಮ ಜನರ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ತ್ವರಿತ ಬದಲಾವಣೆಯನ್ನು ತರುವುದಕ್ಕೆ ಅತ್ಯಂತ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಮತ್ತು ಅತ್ಯಾವಶ್ಯಕ ಪರಿಕರಗಳನ್ನು ಒದಗಿಸುವ ಮೂಲಭೂತ ಕಾರ್ಯಗಳ ಕಡೆಗೆ ನನ್ನ ಸರ್ಕಾರ ತನ್ನ ಗಮನವನ್ನು ಕೇಂದ್ರೀಕರಿಸುತ್ತದೆ. ಹೊಸ ಉದ್ಯಮಗಳನ್ನು ಪ್ರಾರಂಭಿಸಲು ಕರ್ನಾಟಕದಲ್ಲಿರುವ ಅನುಕೂಲಕರ ವಾತಾವರಣದ ಪ್ರಯೋಜನವನ್ನು ಪಡೆದುಕೊಳ್ಳಲು ರಾಜ್ಯದೊಳಗಿನ ಹಾಗೂ ರಾಜ್ಯದ ಹೊರಗಿನ ಖಾಸಗಿ ಉದ್ಯಮಿಗಳಿಗೆ ಸದಾ ಆಹ್ವಾನವಿದೆ. ಅನುಚಿತ ವಿಳಂಬ ಮಾಡದೆ ಭೂಮಿ, ವಿದ್ಯುಚ್ಛಕ್ತಿ, ಸಂಪರ್ಕ, ನೀರು ಇತ್ಯಾದಿ ಅವಶ್ಯಕ ಸೌಲಭ್ಯಗಳನ್ನು ಅವರಿಗೆ ಒದಗಿಸಲಾಗುವುದೆಂದು ಅವರು ಭರವಸೆಯಿಂದಿರಬಹುದು. ಗ್ರಾಮಾಂತರ ಔದ್ಯಮೀಕರಣ ಮತ್ತು ಉದ್ಯೋಗಾವಕಾಶ ಸೃಜನೆಯ ಗತಿಯನ್ನು ತೀವ್ರಗೊಳಿಸುವಲ್ಲಿ ಸರ್ಕಾರವು ಸ್ವತಃ ಪ್ರಯತ್ನಿಸುತ್ತದೆ.

18. ಔದ್ಯಮೀಕರಣ ಹಾಗೂ ಬೃಹತ್ ಪ್ರಮಾಣದ ವಲಸೆಯ ಪರಿಣಾಮವಾಗಿ ಉದ್ಭವಿಸಿರುವ ನಗರೀಕರಣ ಮತ್ತು ನಗರಾಭಿವೃದ್ಧಿಗೆ ಸಂಬಂಧಿಸಿದ ಸಮಸ್ಯೆಗಳು ತುರ್ತುಗಮನ ಹರಿಸಬೇಕಾದಂಥವು ಮತ್ತು ಸಂಕೀರ್ಣ ಸ್ವರೂಪದ್ದೂ ಆಗಿವೆ. ಕರ್ನಾಟಕದ ನಗರ ಪ್ರದೇಶಗಳ ಜನಸಂಖ್ಯೆ 1.38 ಕೋಟಿಯಷ್ಟಾಗಿದ್ದು, ಇದು ರಾಜ್ಯದ ಜನಸಂಖ್ಯೆಯ ಶೇಕಡ 30.9 ರಷ್ಟಾಗುತ್ತದೆ. ನಮ್ಮ ರಾಜ್ಯದಲ್ಲಿ ಈಗ ಒಂದು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಒಂದನೇ ವರ್ಗದ 21 ನಗರಗಳಿವೆ. ಆದುದರಿಂದ, ಈಗ ನಗರಾಭಿವೃದ್ಧಿ ಬಗ್ಗೆ ಒಂದು ಸೂಕ್ತ ನೀತಿಯನ್ನು ರೂಪಿಸುವುದು ಅಗತ್ಯವಾಗಿದೆ. ನನ್ನ ಸರ್ಕಾರವು, ರಾಜ್ಯದ ವಿವಿಧ ವಲಯಗಳ ಸಂತುಲಿತ ಅಭಿವೃದ್ಧಿಯ ಗುರಿ ಹೊಂದಿರುವ ನೀತಿಯೊಂದನ್ನು ಆಳವಡಿಸಿಕೊಳ್ಳ ಬಯಸುತ್ತದೆ. ಒಂದು ಕಡೆ ಬೆಂಗಳೂರಿನ ಬೆಳವಣಿಗೆಯನ್ನು ನಿಯಂತ್ರಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾದರೆ, ಮತ್ತೊಂದೆಡೆ ರಾಜ್ಯದ ಇತರ ಪಟ್ಟಣಗಳು ಹಾಗೂ ನಗರಗಳ ಅಭಿವೃದ್ಧಿಗೆ ಪ್ರೋತ್ಸಾಹ ನೀಡಲಾಗುವುದು.

19. ರಾಜಧಾನಿ ನಗರವಾದ ಬೆಂಗಳೂರು, ಕ್ಷಿಪ್ರ ಹಾಗೂ ಗೊತ್ತುಗುರಿಯಿಲ್ಲದ ಬೆಳವಣಿಗೆಯ ಪ್ರತಿಕೂಲ ಪರಿಣಾಮಗಳಾದ, ವಸತಿ, ನೀರು ಮತ್ತು ಸಾರಿಗೆಗಳ ಅಭಾವ, ನಿಬಿಡ ಸಂಚಾರ, ಮಾಲಿನ್ಯ ಇತ್ಯಾದಿ ದುಷ್ಪರಿಣಾಮಗಳನ್ನು ಅನುಭವಿಸುತ್ತಿದೆ. ಈ ಸಮಸ್ಯೆಗಳನ್ನು ನಿಯಂತ್ರಣದಲ್ಲಿರಿಸುವ ದೃಷ್ಟಿಯಿಂದ ಬೆಂಗಳೂರಷ್ಟೇ ಅಲ್ಲ, ನಗರದ ಸುತ್ತಮುತ್ತಲಿನ ಇಡೀ ಪ್ರದೇಶದ ಬಗ್ಗೆ ಯೋಜಿಸಿ ಅಭಿವೃದ್ಧಿಪಡಿಸುವ ಹೊಸದೊಂದು ಪ್ರಸ್ತಾವವನ್ನು ಆಳವಡಿಸಿಕೊಳ್ಳುವ ಅಗತ್ಯತೆ ಕಂಡು ಬಂದಿದೆ. ಆದುದರಿಂದ, ಯೋಜನೆಯ ವ್ಯಾಪ್ತಿಗೆ ತರಬೇಕಾದ ಪ್ರಾದೇಶಿಕ, ಆರ್ಥಿಕ ಹಾಗೂ ಸಾಮಾಜಿಕ ಅಂಶಗಳು ಒಳಗೊಂಡಿರುವಂಥ ಸಮಗ್ರ ಪ್ರಾದೇಶಿಕ ಅಭಿವೃದ್ಧಿ ಯೋಜನೆಯೊಂದನ್ನು ತಯಾರಿಸಲು ಉದ್ದೇಶಿಸಲಾಗಿದೆ. ನನ್ನ ಸರ್ಕಾರವು ರಸ್ತೆ ಹಾಗೂ ರಸ್ತೆ ಸಾರಿಗೆ ಸೇವೆಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡುವ ಸಲುವಾಗಿ

ಬೆಂಗಳೂರಿಗೆ ಬೃಹತ್ ಪ್ರಮಾಣದ ಕ್ಷಿಪ್ರಗತಿ ಸಾರಿಗೆ ವ್ಯವಸ್ಥೆಯನ್ನು ಒದಗಿಸುವ ಕ್ರಮಗಳನ್ನು ಆರಂಭಿಸಲು ಕೂಡ ಉದ್ದೇಶಿಸುತ್ತದೆ. ನಗರ ನಿರ್ವಹಣೆಗಾಗಿ ಸಾಂಸ್ಥಿಕ ವ್ಯವಸ್ಥೆಗಳನ್ನು ಏಕರೂಪಗೊಳಿಸುವ ದೃಷ್ಟಿಯಿಂದ ನನ್ನ ಸರ್ಕಾರವು ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರಿಗಳ ಪಾತ್ರಗಳನ್ನು ಪುನರಾವಲೋಕನ ಮಾಡಲು ಕೂಡ ಉದ್ದೇಶಿಸಿದೆ. ಮಹಾನಗರ ಪ್ರದೇಶದ ವ್ಯವಸ್ಥಿತ ಅಭಿವೃದ್ಧಿಯ ಕ್ರಮಗಳ ಪ್ರಗತಿಯನ್ನು ಯೋಜಿಸಿ, ನಿಯಂತ್ರಿಸುವುದಕ್ಕಾಗಿ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಈಗಾಗಲೇ ಒಂದು ಉನ್ನತಾಧಿಕಾರ ಸಮಿತಿಯನ್ನು ಸಹ ರಚಿಸಲಾಗಿದೆ.

20. ನನ್ನ ಸರ್ಕಾರವು ಕೃಷಿ ಉತ್ಪಾದಕತೆಯಲ್ಲಿ ಸುಧಾರಣೆ ತರುವ ಹಾಗೂ ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಉದ್ದೇಶದಿಂದ, ನೀರಾವರಿ ಅಭಿವೃದ್ಧಿಗೆ ಅತ್ಯಂತ ಮಹತ್ವವನ್ನು ನೀಡುತ್ತದೆ. ಬಚಾವತ್ ತೀರ್ಪಿನ ಪ್ರಕಾರ, ನಮ್ಮ ಪಾಲಿನ ನೀರನ್ನು ಸಕಾಲದಲ್ಲಿ ಎಂದರೆ ಕ್ರಿ.ಶ. 2000ದೊಳಗಾಗಿ ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವ ಹಾಗೆ, ಕೃಷ್ಣಾ ನದಿ ಕಣಿವೆ ಪ್ರದೇಶದಲ್ಲಿನ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವ ಕಾರ್ಯವನ್ನು ತ್ವರಿತಗೊಳಿಸಲು ನನ್ನ ಸರ್ಕಾರವು ಬದ್ಧವಾಗಿದೆಯೆಂಬ ಅಂಶವನ್ನು ನಾನು ಇಲ್ಲಿ ಒತ್ತಿ ಹೇಳಬಯಸುತ್ತೇನೆ. ಅದೇ ರೀತಿಯಾಗಿ, ಕಾನೂನು ಪ್ರಕ್ರಿಯೆಗೆ ಸಲ್ಲತಕ್ಕ ಸೂಕ್ತ ಗಮನ ನೀಡಿ ಎಲ್ಲಾ ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ ಕಾವೇರಿ ನದಿ ಕಣಿವೆ ಪ್ರದೇಶದ ನಮ್ಮ ರೈತರು ಎದುರಿಸುತ್ತಿರುವ ಶತಮಾನದಷ್ಟು ಹಳೆಯದಾದ ಬವಣೆಗೆ ಇತಿಶ್ರೀ ಹಾಡುವುದು ಮತ್ತು ಈ ನದಿ ಕಣಿವೆ ಪ್ರದೇಶದಲ್ಲಿನ ನಮ್ಮ ಪಾಲಿನ ನೀರು ಸಂಪೂರ್ಣವಾಗಿ ಬಳಕೆಯಾಗುವುದನ್ನು ಖಚಿತ ಪಡಿಸಿಕೊಳ್ಳುವುದು ನಮ್ಮ ಪ್ರಯತ್ನವಾಗಿರುತ್ತದೆ.

21. ನನ್ನ ಸರ್ಕಾರವು ವಿದ್ಯುಚ್ಛಕ್ತಿ ವಲಯಕ್ಕೆ ಅತಿ ಹೆಚ್ಚಿನ ಆದ್ಯತೆ ನೀಡುತ್ತದೆ ಮತ್ತು ಕರ್ನಾಟಕ ವಿದ್ಯುತ್ ನಿಗಮದ ಆಶ್ರಯದಲ್ಲಿ ಪ್ರಗತಿಯಲ್ಲಿರುವ ಎಲ್ಲಾ ವಿದ್ಯುತ್ ಉತ್ಪಾದನಾ ಯೋಜನೆಗಳಿಗೆ ಸಾಕಷ್ಟು ಹಣ ಒದಗಿಸುತ್ತದೆ. ಕರ್ನಾಟಕ ವಿದ್ಯುತ್ ಮಂಡಳಿಯ ವಿದ್ಯುತ್ ರವಾನೆ ಮತ್ತು ವಿತರಣಾ ವ್ಯವಸ್ಥೆಗಳನ್ನು ಬಲಪಡಿಸುವ ಏರ್ಪಾಡುಗಳನ್ನು ಸಹ ಹೆಚ್ಚಿಸಲಾಗುವುದು. ವಿದ್ಯುತ್ತಿಗಾಗಿ ಹೆಚ್ಚುತ್ತಿರುವ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಉತ್ಪಾದನೆಯಾಗುವಂತೆ ನೋಡಿಕೊಳ್ಳುವ ದೃಷ್ಟಿಯಿಂದ ನನ್ನ ಸರ್ಕಾರ, ಈ ಕ್ಷೇತ್ರದಲ್ಲಿ, ವಿಶೇಷವಾಗಿ ''ಶಾಖೋತ್ಪನ್ನ ವಿದ್ಯುತ್ ಸ್ಥಾವರ''ಗಳ ಕ್ಷೇತ್ರದಲ್ಲಿ ಖಾಸಗಿ ವಲಯವು ಪಾಲ್ಗೊಳ್ಳುವುದನ್ನು ಪ್ರೋತ್ಸಾಹಿಸಲು ಉದ್ದೇಶಿಸಿದೆ.

22. ರಾಜ್ಯದ ಆರ್ಥಿಕ ಅಭಿವೃದ್ಧಿಯ ಪ್ರಮುಖ ಭಾಗವಾಗಿ ಮುಂದುವರಿದಿರುವ ಕೃಷಿ ಮತ್ತು ಇತರ ಸಂಬಂಧಿಸಿದ ಚಟುವಟಿಕೆಗಳ ಕ್ಷೇತ್ರದಲ್ಲಿ ನನ್ನ ಸರ್ಕಾರ, ಸುಮಾರು 89 ಲಕ್ಷ ಟನ್ ಆಹಾರ ಧಾನ್ಯಗಳು, 20.03 ಲಕ್ಷ ಟನ್ ಎಣ್ಣೆಬೀಜಗಳು, 8.70 ಲಕ್ಷ ಬೇಲ್‌ಗಳಷ್ಟು ಹತ್ತಿ ಮತ್ತು 200 ಲಕ್ಷ ಟನ್ ಕಬ್ಬಿನ ಉತ್ಪಾದನೆಯ ಗುರಿಯನ್ನು ಸಾಧಿಸಲು ಉದ್ದೇಶಿಸಿದೆ. ಪದೇ ಪದೇ ತಲೆದೋರುವ ಕ್ಷಾಮ ಪರಿಸ್ಥಿತಿಯ ಒತ್ತಡವನ್ನು ತಡೆದುಕೊಳ್ಳಲು ಸಾಧ್ಯವಾಗುವಂತೆ ರೈತರಿಗೆ ಸಹಾಯ ಮಾಡುವ ಉದ್ದೇಶದಿಂದ ಒಣ ಮತ್ತು ಮಳೆ ಆಧಾರಿತ ಬೇಸಾಯದ ಸಮಸ್ಯೆಗಳ ಬಗ್ಗೆ ನನ್ನ ಸರ್ಕಾರವು ಹೆಚ್ಚು ಗಮನ ನೀಡಲಿದೆ. ಈ ಸಂಬಂಧದಲ್ಲಿ, ಜಲವಿಭಾಜಕ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮದ ವ್ಯಾಪ್ತಿಗೆ ಸುಮಾರು 1,44,000 ಹೆಕ್ಟೇರ್ ಭೂಮಿಯನ್ನು ತರಲು ಯೋಜಿಸಲಾಗಿದೆ. ಅಲ್ಲದೆ, ವಿರಳ ಜಲಸಂಪನ್ಮೂಲವನ್ನು ವಿಹಿತ ಪ್ರಮಾಣದಲ್ಲಿ ಬಳಸಿಕೊಳ್ಳುವ ಸಲುವಾಗಿ ತುಂತುರು ಮತ್ತು ಹನಿ ನೀರಾವರಿ ಪದ್ಧತಿಯ ಉಪಯೋಗವನ್ನು ಜನಪ್ರಿಯಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

23. ರಾಜ್ಯದಲ್ಲಿ ಹಣ್ಣುಗಳು, ತರಕಾರಿಗಳು, ಪ್ಲಾಂಟೇಷನ್ ಬೆಳೆಗಳು, ವಾಣಿಜ್ಯ ಪುಷ್ಪಗಳು, ಔಷಧಿ ಮತ್ತು ಸುಗಂಧ ಸಸ್ಯಗಳ ಉತ್ಪಾದನೆಗೆ ಅನುಕೂಲಕರವಾದಂಥ ನಿಸರ್ಗದತ್ತ ವಾತಾವರಣವಿದೆ. ಬಿತ್ತಲು ಬೇಕಾದ ಬೀಜಗಳು, ನೆಡಲು ಬೇಕಾದ ಸಸಿಗಳು ಮತ್ತು ಸಾಲ ಸೌಲಭ್ಯಗಳು ಸಾಕಷ್ಟು ಲಭ್ಯವಿಲ್ಲದಿರುವುದು ಮತ್ತು ಕಟಾವಿನ ನಂತರದ ಮಾರಾಟ ಸೌಲಭ್ಯಗಳನ್ನು ಒದಗಿಸುವ ಬೆಂಬಲ ಸೇವೆಗಳ ಕೊರತೆಯೇ ಮುಂತಾದ ನಿರ್ಬಂಧಗಳ ಕಾರಣದಿಂದಾಗಿ ಈ ಸಾಮರ್ಥ್ಯವನ್ನು ಪೂರ್ಣವಾಗಿ ಬಳಸಿಕೊಳ್ಳಲಾಗಿಲ್ಲ. ಪ್ರಮುಖ ಉತ್ತೇಜಕ ನೀತಿಗಳ ಮೂಲಕ ತೋಟಗಾರಿಕೆ ಅಭಿವೃದ್ಧಿಗೆ ಚಾಲನ ಶಕ್ತಿ ನೀಡುವ ಸಲುವಾಗಿ ನನ್ನ ಸರ್ಕಾರವು ಈ ನಿರ್ಬಂಧಗಳನ್ನು ನಿವಾರಿಸಬಯಸುತ್ತದೆ.

24. ಬಡತನ ನಿವಾರಣಾ ಕ್ರಮಗಳ ಒಂದು ಭಾಗವಾಗಿ, ಕುರಿ ಮತ್ತು ಉಣ್ಣೆ ಅಭಿವೃದ್ಧಿ, ಹಂದಿ ಸಾಕಣೆ ಅಭಿವೃದ್ಧಿ ಮುಂತಾದ ಯೋಜನೆಗಳ ವ್ಯಾಪ್ತಿಯನ್ನು ನನ್ನ ಸರ್ಕಾರವು ವಿಸ್ತರಿಸುತ್ತಿದೆ. ಹೈನುಗಾರಿಕೆ ವಲಯದಲ್ಲಿ ನನ್ನ ಸರ್ಕಾರ ಮುಂದಿನ ವರ್ಷದ ಹೊತ್ತಿಗೆ 30,000 ಹೊಸ ಸದಸ್ಯರನ್ನು ನೋಂದಾಯಿಸಿಕೊಳ್ಳುವ ಮೂಲಕ ಮತ್ತು ಹೊಸ ಡೈರಿಗಳು ಕಾರ್ಯಾರಂಭ ಮಾಡುವ ಮೂಲಕ ಡೈರಿ ಸಹಕಾರ ಸಂಘಗಳ ಕಾರ್ಯಚಟುವಟಿಕೆಗಳನ್ನು ಬಲಪಡಿಸಲು ಯೋಜಿಸಿದೆ.

25. ಮೀನು ಉತ್ಪಾದನೆಯನ್ನು ಹೆಚ್ಚಿಸುವ ಹಾಗೂ ಮೀನುಗಾರರ ಸ್ಥಿತಿಗತಿಯ ಸುಧಾರಣೆಗೆ ಸಂಬಂಧಿಸಿದ ನಮ್ಮ ಕಾರ್ಯಕ್ರಮವನ್ನು ಇನ್ನಷ್ಟು ಬಲಪಡಿಸಲಾಗುವುದು. ವಿಶೇಷವಾಗಿ, ನನ್ನ ಸರ್ಕಾರವು ಉಪ್ಪು ನೀರಿನ ಮೀನು ಕೃಷಿಗೆ ಉತ್ತೇಜನ ನೀಡಬಯಸುತ್ತದೆ. ಕೆಲವು ಮೀನುಗಾರರ ಸಹಕಾರ ಸಂಘಗಳಿಗೆ ಹಾಗೂ ಉದ್ಯಮಿಗಳಿಗೆ 175 ಹೆಕ್ಟೇರು ಜಮೀನನ್ನು ಹಂಚುವ ಮೂಲಕ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ. ನನ್ನ ಸರ್ಕಾರವು ಮೀನುಗಾರರಿಗೆ ಮನೆ ಮತ್ತು ಇತರ ಪೌರ ಸೌಲಭ್ಯಗಳನ್ನು ಒದಗಿಸುವುದೇ ಮುಂತಾದ ಮೀನುಗಾರರ ಕಲ್ಯಾಣ ಯೋಜನೆಗಳ ವ್ಯಾಪ್ತಿಯನ್ನು ಕೂಡ ವಿಸ್ತರಿಸುತ್ತದೆ.

26. ಅರಣ್ಯಗಳು, ಜೀವಿ ಪರಿಸರದ ಮಹತ್ವಪೂರ್ಣ ಭಾಗವಾಗಿರುತ್ತವೆ. ವನ ನಿರ್ಮಾಣಕ್ಕೆ ತೀವ್ರ ಉತ್ತೇಜನ ಅಗತ್ಯವಾಗಿದ್ದು ಹೆಚ್ಚಿನ ಪ್ರಮಾಣದಲ್ಲಿ ಜನರು ಪಾಲ್ಗೊಳ್ಳುವುದರಿಂದ ಮಾತ್ರ ಇದನ್ನು ಸಾಧಿಸಲು ಸಾಧ್ಯವೆಂಬುದನ್ನು ನಾವು ಮನಗಂಡಿದ್ದೇವೆ. ಆದುದರಿಂದ, ''ಜನರು ಪಾಲ್ಗೊಳ್ಳುವ ಮೂಲಕ ಅರಣ್ಯ ನಿರ್ವಹಣೆ'' ಎಂದು ಕರೆಯಲಾಗುವ ಯೋಜನೆಯನ್ನು ಪ್ರಾರಂಭಿಸಲು ಪ್ರಸ್ತಾವಿಸಲಾಗಿದೆ. ಇದು, ಬ್ರಿಟನ್ನಿನ ಸಾಗರೋತ್ತರ ಅಭಿವೃದ್ಧಿ ನಿರ್ವಹಣಾ ಸಂಸ್ಥೆಯ (ಒಡಿಎ) ನೆರವಿನಿಂದ ಅನುಷ್ಠಾನಗೊಳಿಸಲಿರುವ ಪಶ್ಚಿಮ ಘಟ್ಟಗಳ ಅರಣ್ಯ ಮತ್ತು ಪರಿಸರ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ಇರುವ ಸಮಗ್ರ ಕಾರ್ಯ ತಂತ್ರದ ಭಾಗವಾಗಿರುತ್ತದೆ.

27. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಕ್ಷೇತ್ರದಲ್ಲಿ ನನ್ನ ಸರ್ಕಾರ ವಿಶೇಷವಾಗಿ ಗ್ರಾಮೀಣ ಮತ್ತು ಅರೆ ನಗರ ಪ್ರದೇಶಗಳಲ್ಲಿ ಆರೋಗ್ಯ ರಕ್ಷಣಾ ಕಾರ್ಯಕ್ರಮದ ಪ್ರತಿಬಂಧಕ ಅಂಶಗಳಿಗೆ ಒತ್ತು ನೀಡುತ್ತದೆ. ಈ ಸಂಬಂಧದಲ್ಲಿ ನಾವು ಗ್ರಾಮೀಣ ನೈರ್ಮಲ್ಯದ ಸುಧಾರಣೆಗೆ ವಿಶೇಷ ಗಮನ ನೀಡಲು ಉದ್ದೇಶಿಸಿದ್ದೇವೆ. ರಾಜ್ಯದಲ್ಲಿ, ಜನನ ಪ್ರಮಾಣ ಕಡಿಮೆಯಾಗುವಂತೆ ಮಾಡುವ ದೃಷ್ಟಿಯಿಂದ ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ಹೆಚ್ಚು ಪರಿಣಾಮಕಾರಿ ರೀತಿಯಲ್ಲಿ ಜಾರಿಗೆ ತರಲು ಪ್ರಾಮುಖ್ಯತೆ ನೀಡಲಾಗುವುದು. ಆಸ್ಪತ್ರೆಗಳಲ್ಲಿ ವೈದ್ಯರು ಮತ್ತು ಅರೆ ವೈದ್ಯಕೀಯ ಸಿಬ್ಬಂದಿ ಸೇವೆ ದೊರೆಯುವಂತೆ ಮಾಡುವ ಸಲುವಾಗಿ ಇಲಾಖೆಯಲ್ಲಿನ ಖಾಲಿ ಸ್ಥಾನಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

28. ನನ್ನ ಸರ್ಕಾರವು, ಸಮಾಜದ ಅತಿ ಪ್ರಮುಖ ಸಮುದಾಯವಾದ ದುರ್ಬಲ ವರ್ಗಗಳಿಗೆ ವಸತಿಯನ್ನು ಒದಗಿಸುವ ವಿಷಯಕ್ಕೆ ಆದ್ಯತೆ ನೀಡುತ್ತದೆ. ಗ್ರಾಮಾಂತರ ಮತ್ತು ನಗರ ಪ್ರದೇಶಗಳಲ್ಲಿ ನಿವೇಶನ ಇಲ್ಲದ ಮತ್ತು ವಸತಿ ಇಲ್ಲದ ಕುಟುಂಬಗಳಿಗೆ ಆದಷ್ಟು ಬೇಗನೆ ಈ ಮೂಲಭೂತ ಅಗತ್ಯತೆಗಳನ್ನು ಪೂರೈಸಲು ಬೃಹತ್ ಯೋಜನೆಯೊಂದನ್ನು ಸಿದ್ಧಪಡಿಸಲಾಗುವುದು.

29. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಂಬಂಧಿಸಿದ ವಿವಿಧ ಕಲ್ಯಾಣ ಕಾರ್ಯಕ್ರಮಗಳಿಗೆ ನನ್ನ ಸರ್ಕಾರವು ಅತ್ಯಂತ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತದೆ. ಈ ವಂಚಿತ ವರ್ಗಗಳಿಗೆ ಸಂವಿಧಾನದ ಅಡಿಯಲ್ಲಿ ಖಚಿತಪಡಿಸಿರುವ ಹಕ್ಕುಗಳನ್ನು ಅನುಭವಿಸಲು ಸಾಧ್ಯವಾಗುವಂತೆ ಮೀಸಲಾತಿ ನೀತಿಯನ್ನು ಕಡ್ಡಾಯವಾಗಿ ಜಾರಿಗೆ ತರುವಂತೆ ಮಾಡುವುದು ನಮ್ಮ ಪ್ರಯತ್ನವಾಗಿರುತ್ತದೆ. ನನ್ನ ಸರ್ಕಾರವು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಸಂಪೂರ್ಣವಾಗಿ ಬದ್ಧವಾಗಿದೆ ಮತ್ತು ನ್ಯಾಯಮೂರ್ತಿ ಚಿನ್ನಪ್ಪ ರೆಡ್ಡಿ ಆಯೋಗದ ವರದಿಯ ಶಿಫಾರಸುಗಳನ್ನು ಜಾರಿಗೆ ತರುವಲ್ಲಿ ಆಗಿರುವ ವಿಳಂಬದ ಬಗ್ಗೆ ತೀರಾ ಆತಂಕಗೊಂಡಿದೆ. ಈ ಕುರಿತು ನಾವು ಸಧ್ಯದಲ್ಲೆ ಸೂಕ್ತ ತೀರ್ಮಾನ ತೆಗೆದುಕೊಳ್ಳಲಿದ್ದೇವೆ.

30. ಗ್ರಾಮೀಣ ಅಭಿವೃದ್ಧಿ ಕ್ಷೇತ್ರದಲ್ಲಿ 11,000 ರೂಪಾಯಿಗಳಂತೆ ಕಡಿಮೆ ವಾರ್ಷಿಕ ಆದಾಯ ಹೊಂದಿದ್ದು, ಬಡತನದ ರೇಖೆಗಿಂತ ಈಗಲೂ ಕೆಳಗಿರುವ ಕುಟುಂಬಗಳನ್ನು ಆ ಮಟ್ಟದಿಂದ ಮೇಲೆತ್ತಲು ಸಮಗ್ರ ಗ್ರಾಮೀಣ ಅಭಿವೃದ್ಧಿಯಂಥ ಕಾರ್ಯಕ್ರಮಗಳನ್ನು ಸೂಕ್ತ ರೀತಿಯಲ್ಲಿ ಜಾರಿಗೊಳಿಸಲು ನನ್ನ ಸರ್ಕಾರವು ಪ್ರಾಮುಖ್ಯತೆ ನೀಡುತ್ತದೆ. ಜವಹರ್ ರೋಜಗಾರ್ ಯೋಜನೆಯಂತಹ ಮಜೂರಿ ಉದ್ಯೋಗ ಆಧಾರಿತ ಕಾರ್ಯಕ್ರಮವನ್ನು ಚುರುಕಾಗಿ ಜಾರಿಗೊಳಿಸಲಾಗುವುದು ಹಾಗೂ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳವರಿಗೆ ಮನೆಗಳನ್ನು ನಿರ್ಮಿಸುವುದಕ್ಕಾಗಿ ರೂಪಿಸಿರುವ ಇಂದಿರಾ ಆವಾಸ್ ಯೋಜನೆಯಂಥ ವಿಶೇಷ ಕಾರ್ಯಕ್ರಮಗಳ ಅಡಿಯಲ್ಲಿನ ಸೌಲಭ್ಯಗಳು ಅವರಿಗೆ ವಾಸ್ತವವಾಗಿ ದೊರೆತಿವೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು. ಗ್ರಾಮಾಂತರ ಕುಡಿಯುವ ನೀರಿನ ಯೋಜನೆಗಳು ಮತ್ತು ಗ್ರಾಮಾಂತರ ನೈರ್ಮಲ್ಯಗಳೆರಡಕ್ಕೂ ವಿಶೇಷ ಯೋಜನೆಗಳನ್ನು ವಿಶ್ವ ಬ್ಯಾಂಕ್, ಡ್ಯಾನಿಡ ಹಾಗೂ ನೆದರ್‌ಲ್ಯಾಂಡ್ ಸರ್ಕಾರದ ನೆರವಿನಿಂದ ಕೈಗೊಳ್ಳಲಾಗುತ್ತಿದೆ. ಅಧಿಕ ಪ್ರಮಾಣದ ಫ್ಲೋರೈಡ್ ಅಥವಾ ಉಪ್ಪಿನಂಶವಿರುವ ಕುಡಿಯುವ ನೀರಿನ ಮೂಲಗಳನ್ನು ಹೊಂದಿರುವ ಸಮಸ್ಯಾ ಗ್ರಾಮಗಳಿಗೆ ವಿಶೇಷ ಗಮನ ನೀಡಲು ನನ್ನ ಸರ್ಕಾರ ಉದ್ದೇಶಿಸಿದೆ.

31. ವಿಕೇಂದ್ರೀಕೃತ ಪದ್ಧತಿಯ ಸರ್ಕಾರದ ಬಗ್ಗೆ ನನ್ನ ಸರ್ಕಾರಕ್ಕಿರುವ ಪೂರ್ಣ ವಿಶ್ವಾಸವನ್ನು ಪುನರುಚ್ಚರಿಸಬಯಸುತ್ತೇನೆ. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅಧಿಕಾರಿಗಳನ್ನು ಇನ್ನಷ್ಟು ಹೆಚ್ಚು ಪರಿಣಾಮಕಾರಿಯಾಗಿ ವರ್ಗಾವಣೆ ಮಾಡುವ ಸಲುವಾಗಿ, ಇತ್ತೀಚೆಗೆ ಭಾರತೀಯ ಸಂಸತ್ತು ಅಂಗೀಕರಿಸಿದ ಸಂವಿಧಾನದ 73ನೇ ತಿದ್ದುಪಡಿಯ ಅನ್ವಯ ಮೂರು ಹಂತಗಳ ನೇರ ಚುನಾಯಿತ ಪಂಚಾಯತ್ ರಾಜ್ ವ್ಯವಸ್ಥೆಗೆ ಸಂಬಂಧಿಸಿದಂತೆ ಸಮಗ್ರ ಶಾಸನವೊಂದನ್ನು ಜಾರಿಗೆ ತರಲು ನನ್ನ ಸರ್ಕಾರವು ಉದ್ದೇಶಿಸಿದೆ. ಈ ಪಂಚಾಯತ್ ರಾಜ್ ಸಂಸ್ಥೆಗಳಿಗೆ 1993ರಲ್ಲಿ ಸಾಧ್ಯವಾದಷ್ಟು ಬೇಗನೆ ಚುನಾವಣೆಗಳು ನಡೆಯಲಿವೆ. ಗ್ರಾಮ, ತಾಲ್ಲೂಕು ಮತ್ತು ಜಿಲ್ಲೆಯ ಎಲ್ಲ ಮೂರು ಹಂತಗಳಲ್ಲಿ ಜನರು ಹೆಚ್ಚುಹೆಚ್ಚಾಗಿ ಹಾಗೂ ನೇರವಾಗಿ ಪಾಲ್ಗೊಳ್ಳುವುದರಿಂದ ಗ್ರಾಮೀಣ ಅಭಿವೃದ್ಧಿಯ ಸದೃಢ ನೆಲಗಟ್ಟಿನ ಮೇಲೆ ನಿಲುತ್ತದೆಂಬ ನಂಬಿಕೆ ನನಗಿದೆ.

32. ಮಾನ್ಯ ಸದಸ್ಯರೇ, ನಿಮ್ಮ ಮುಂದೆ ಬಹಳಷ್ಟು ಕಾರ್ಯಕಲಾಪಗಳಿವೆ. ಶಾಸನ ರಚನೆಗೆ ಸಂಬಂಧಿಸಿದ ಕ್ರಮಗಳಷ್ಟೇ ಅಲ್ಲದೆ, ಮುಂದಿನ ವರ್ಷದ ಆಯವ್ಯಯವನ್ನು ನೀವು ಪರಿಶೀಲಿಸಬೇಕಾಗಿದೆ. ನಿಮ್ಮೆಲ್ಲ ಚರ್ಚೆಗಳಲ್ಲಿ, ನಿಮ್ಮಲ್ಲಿ ನಂಬಿಕೆ ಹಾಗೂ ವಿಶ್ವಾಸವಿಟ್ಟಿರುವ ಕರ್ನಾಟಕ ಜನತೆಯ ಕಲ್ಯಾಣ ಸದಾ ನಿಮ್ಮ ಮನಸ್ಸಿನಲ್ಲಿರುತ್ತದೆಂಬ ಭರವಸೆ ನನಗಿದೆ. ನಿಮ್ಮ

ಚರ್ಚೆಗಳು ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಜೈ ಹಿಂದ್ - ಜೈ ಕರ್ನಾಟಕ

(The House adjourned at 4-23 P.M. to reassembled after half an hour)

(ಸದನವು 4 ಗಂಟೆ 50 ನಿಮಿಷಕ್ಕೆ ಪುನಃ ಸಮಾವೇಶಗೊಂಡಿತು)

(ಹಂಗಾಮಿ ಸಭಾಧ್ಯಕ್ಷರಾದ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಅಧ್ಯಕ್ಷ ಸ್ಥಾನದಲ್ಲಿ ಉಪಸ್ಥಿತರಾದರು.)

ಹಂಗಾಮಿ ಅಧ್ಯಕ್ಷರು:- ಮಾನ್ಯ ಕಾರ್ಯದರ್ಶಿಯವರು ಸನ್ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಸಭೆಯ ಮುಂದೆ ಇಡುವುದು.

ಕಾರ್ಯದರ್ಶಿ, ವಿಧಾನ ಮಂಡಲ:- ಸನ್ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಸಭೆಯ ಮುಂದೆ ಇಡುತ್ತೇನೆ.

(ಸನ್ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಸಭೆಯ ಮುಂದೆ ಇಡಲಾಯಿತು)

ಹಂಗಾಮಿ ಅಧ್ಯಕ್ಷರು:- ಈಗ ಸಭೆಯು ಮುಂದುವರಿದು ಸೋಮವಾರ ದಿನಾಂಕ 15.02.1993ರಂದು ಬೆಳಿಗ್ಗೆ 11.00 ಗಂಟೆಗೆ ಮತ್ತೆ ಸೇರುವುದು.

(ಸದನವು ಸಂಜೆ 4.52ಕ್ಕೆ ಮುಕ್ತಾಯವಾಗಿ ಮತ್ತೆ ಸೋಮವಾರ ದಿನಾಂಕ 15.02.1993ರಂದು ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)

* * *